ಶ್ರೀ ಟಿ.ಬಿ. ಜಯಚಂದ್ರ :— ನಮಿ ರೋಗದ ಬಗ್ಗೆ ಸರ್ಕಾರದ ಕಡೆಯಿಂದ ತಕ್ಷಣಗಳೇ ಕಾರ್ಯಾಚರಣೆ ನಡೆಯುತ್ತಿದೆ. ಮೊನೊಕ್ರೊಟೋಪಾಸ್ ಔಷಧಿ ಸರಿಯಾಗಿ ಪೂರೈಕೆಯಾಗುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಕ್ವಿನಲ್‌ಫಾಸ್ ಎನ್ನುವ ಹೊಸ ಔಷಧಿಯನ್ನು ಕೊಡಿಸಲಾಗುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ.

7. ಮಾನ್ಯ ಅಧ್ಯಕ್ಷರು

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ 2000.

ಪರ್ಯಾಲೋಚನಾ ಪ್ರಸ್ತಾಪ

+ ಡಾ: ಬಿ. ಪರಮೇಶ್ವರ್ (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, 2000ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವನೆಯನ್ನು ಮಂಡಿಸಲಾಯಿತು.

ಡಾ: ಬಿ. ಪರಮೇಶ್ವರ್ (ಉನ್ನತ ಶಿಕ್ಷಣ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಪರ್ಯಾಲೋಚನಾ ಪ್ರಸ್ತಾವದ ಮೂಲಕ ಈ ಮಸೂದೆಯನ್ನು ಸದನದ ಮುಂದೆ ತರುವುದಕ್ಕೆ ಕೊನೆಗೂ ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯನ್ನು ತರಬೇಕೆಂದು ಈ ಮಸೂದೆಯನ್ನು ಏನು ಮಂಡಿಸಿದ್ದೇನೆ ಇದಕ್ಕೆ ಬಹಳ ಪ್ರೋತ್ಸಾಹ ಸಿಕ್ಕಿದೆ. ಈ ಸದನದಲ್ಲಿ ಮಂಗಳವಾರದಿಂದ ಇಲ್ಲಿಯವರೆಗೆ ಆದ ಚರ್ಚೆಯಲ್ಲಿ, ಮಾನ್ಯ ಸದಸ್ಯರು ಯಾವ ಯಾವ ರೀತಿಯಲ್ಲಿ ಭಾಗವಹಿಸಿದರು, ಯಾವ ಯಾವ ವಿಷಯಗಳನ್ನು ಎತ್ತಿ ಹೊತ್ತು ಮಾತನಾಡಿದರು, ಯಾವ ರೀತಿ ನಡೆದುಕೊಂಡರು ಎನ್ನುವುದನ್ನು ನೋಡಿದರೆ ಬಹುಶಃ ಶಿಕ್ಷಣಕ್ಕೆ ಖಂಡಿತವಾಗಿ ಬದಲಾವಣೆ ತರುತ್ತಿರುವುದು ಅತ್ಯಾವಶ್ಯಕ ಎನ್ನುವ ನನ್ನ ವಾದಕ್ಕೆ ಶಕ್ತಿ ಇದೆ. ನಮ್ಮ ಸಮಾಜಕ್ಕೆ ಉನ್ನತ ಶಿಕ್ಷಣ ಏಕೆ ಬೇಕಾಗಿದೆ ಎನ್ನುವ ವಿಷಯದಲ್ಲಿ ಬಹಳ ಪ್ರಾಮುಖ್ಯವಾದ ನಾಲ್ಕು ಉದ್ದೇಶಗಳನ್ನು ನಾನು ಪ್ರಸ್ತಾಪ ಮಾಡಬೇಕಾಗುತ್ತದೆ.

> To move into new frontiers of knowledge by fundemental and applied research while aiming at obsorbing the changing nature of society in its various aspects to continuously pass on the tradition through knowledge, skills and values to upcoming generations:

ಮುಂದಿನ ಪೀಳಿಗೆಗೆ ನಮ್ಮ ಟ್ರೆಡಿಷನ್, ಪರಂಪರೆ, ಸ್ಕಿಲ್ಸ್ ಇವೆಲ್ಲವುಗಳ ನಾಲೆಡ್ಜ್‌ನ್ನು ಕಲಿಸುವಂಥಾದ್ದು ಈ ಉನ್ನತ ಶಿಕ್ಷಣದ ಮೂಲ ಉದ್ದೇಶವಾಗಿದೆ. ಎರಡನೆಯದಾಗಿ,

> To provide basic knowledge to the students through teaching and research

ಹಾಗೆಯೇ ವಿಶ್ವವಿದ್ಯಾನಿಲಯಗಳಿಗೆ ಬರುತಕ್ಕಂಥ ವಿದ್ಯಾರ್ಥಿಗಳಿಗೆ ಸಂಶೋಧನೆಗಳ ಮೂಲಕ ಬೇಸಿಕ್ ನಾಲೆಡ್ಜ್‌ನ್ನು ಕಲಿಸುವಂಥದ್ದು ಕೂಡ ಮೂಲತಃ ಉದ್ದೇಶವಾಗಿದೆ. ಇನ್ನೊಂದು ಮುಖ್ಯವಾದ ಉದ್ದೇಶವೇನೆಂದರೆ "To develop skilled personnel to meet the evergrowing and complex needs of the modern society". ಇವತ್ತಿನ ಆಧುನಿಕ ಸಮಾಜಕ್ಕೆ ಬೇಕಾದಂಥ ಸ್ಕಿಲ್ಡ್ ಟ್ರೈನ್ಡ್ ಮ್ಯಾನ್‌ಪವರ್‌ನ್ನು ತಯಾರು ಮಾಡುವಂಥ ಶಿಕ್ಷಣ ಕೂಡ ಉನ್ನತ ಶಿಕ್ಷಣದ ಉದ್ದೇಶವಾಗಿದೆ. ಮತ್ತು to provide the basis for continuing education for updating the knowledge by providing extension service. ಇವತ್ತು ಸಂಶೋಧನೆ ಅಥವಾ ಯಾವುದೇ ಟೀಚಿಂಗ್‌ನ್ನು ನಮ್ಮ ಸಮಾಜದಲ್ಲಿ ಅಳವಡಿಸಿಕೊಂಡು ಬಹಳ ಪ್ರಾಮುಖ್ಯವಾಗಿ ಈ ನಾಲ್ಕು ಉದ್ದೇಶಕ್ಕಾಗಿ ಉನ್ನತ ಶಿಕ್ಷಣ ಇರುವಂಥದ್ದು. ನಮ್ಮ ರಾಜ್ಯದಲ್ಲಿ ಈ ಉದ್ದೇಶಗಳನ್ನು ಇಟ್ಟುಕೊಂಡು ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡಿದ್ದು, 1976ರಲ್ಲಿ ಈ ಎಲ್ಲಾ ವಿಶ್ವವಿದ್ಯಾಲಯಗಳನ್ನು ಒಂದು ಛತ್ರ ತಂದು ಕರ್ನಾಟಕ ಸ್ಟೇಟ್ ಯೂನಿವರ್ಸಿಟಿ ಆಕ್ಟ್ ಎಂದು ಮಾಡಿ ಈ ಉದ್ದೇಶಗಳು ಸಫಲವಾಗುವುದಕ್ಕೆ ಯಾವರೀತಿ ನಡೆದುಕೊಳ್ಳಬೇಕೆನ್ನುವುದನ್ನು ಮಾಡಿದ್ದಾರೆ. ಅದೇ ಸಂದರ್ಭದಲ್ಲಿ ಡಾ: ರಾಜ್ ಎನ್ನುವ ಒಬ್ಬ ಪ್ರೊಫೆಸರ್‌ರನ್ನು ನೇಮಕ ಮಾಡಿ ಈ ಎಲ್ಲಾ ಉದ್ದೇಶಗಳು ಯಾವ ಯಾವ ರೀತಿಯಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಮಾಡಬೇಕು ಎಂದು ಸ್ಪಷ್ಟ ಮಾಡುವುದಕ್ಕೆ ಒಂದು ಕಮಿಟಿಯನ್ನು ಮಾಡಿದಾಗ ಆ ಕಮಿಟಿ ತನ್ನ ವರದಿಯಲ್ಲಿ ಮೂಲತಃ ಬಹಳ ಪ್ರಾಮುಖ್ಯವಾದ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅದನ್ನು ಇಂಪ್ಲಿಮೆಂಟ್ ಮಾಡುವಂಥ ಸಂದರ್ಭದಲ್ಲಿ ಹಿಂದೆ ಇದ್ದಂಥ ಮಾನ್ಯ ಚಾನ್ಸಲರವರು- ಉಸ್ಮಾನಿಯ ವಿಶ್ವವಿದ್ಯಾನಿಲಯದ ಪ್ರೊಫೆಸರ್ ನವನೀತರಾವ್ ಅವರ ಅಧ್ಯಕ್ಷತೆಯಲ್ಲಿ 1992ನೇ ಇಸವಿಯಲ್ಲಿ ಒಂದು ಸಮಿತಿಯನ್ನು ಮಾಡಿದ್ದರು. ಈ ಸಮಿತಿಯನ್ನು ಮಾಡಿದ ಉದ್ದೇಶವೇನೆಂದರೆ- ಉನ್ನತ ಶಿಕ್ಷಣದಲ್ಲಿ ನಾಲ್ಕು ಮೂಲ ಉದ್ದೇಶಗಳು ಏನಿವೆ, ಅವುಗಳನ್ನು ಈ ಸಮಾಜಕ್ಕೆ ಅನುಗುಣವಾಗಿ ಶಿಕ್ಷಣವನ್ನು ಕೊಡುವಾಗ ಯಾವ ಯಾವ ರೀತಿಯಲ್ಲಿ ಮಾಡಬೇಕಾಗುತ್ತದೆ, ಹೇಗೆ ಮಾಡಬೇಕಾಗುತ್ತದೆ ಎಂಬುದರ ಬಗ್ಗೆ ವರದಿ ಕೊಡಲು 12 ಪಾಯಿಂಟ್ಸ್‌ನ ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಆ ಸಮಿತಿಗೆ ಕೊಟ್ಟಿದ್ದರು ಅದರಲ್ಲಿ ಪ್ರಾಮುಖ್ಯವಾಗಿರತಕ್ಕಂಥದ್ದು ಇರತಕ್ಕಂಥದ್ದು. To go into the history of growth and development of the universities and to go into

contribution of universities for development, social transformation and to make recommendations for making them an effective instrument for leadership; To examine the approach for securing better manpower planning; To study the mode of recruitment for teaching and non teaching posts in the universities; To assess the contribution of teaching fraternity of the universities both in quantitative terms and in academic standards; To study the deficiency and drawbacks in the present administrative set up; To study the feasibility of granting autonomy of affiliated institutions and post-graduate departments; To keep in view the perspective of ten or more years in making its suggestions.

(ಈ ಹಂತದಲ್ಲಿ ಶ್ರೀ ಬಿ.ಬಿ. ಶಿವಪ್ಪ ಅವರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಹೀಗೆ ಪ್ರೊ: ನಂಜುಂಡಪ್ಪನವರು ಕಮಿಟಿಗೆ ಕೊಟ್ಟಿರುವ ಹನ್ನೆರಡು ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ವಿಳೇಟನ್ನು ಓದಿದ್ದೇನೆ. ಈ ಟರ್ಮ್ಸ್ ಆಫ್ ರೆಫರೆನ್ಸ್‌ನ್ನು ಗಮನದಲ್ಲಿಟ್ಟುಕೊಂಡು ನಮ್ಮ ರಾಜ್ಯದಲ್ಲಿರುವಂಥ ವೈಸ್-ಚಾನ್ಸಲರ್‌ಗಳನ್ನು, ಬೇರೆ ಬೇರೆ ವಿದ್ಯಾಸ್ಥಿತಿಗಳಲ್ಲಿ, ಬೆಲಸ ಮಾಡಿರತಕ್ಕಂಥವರನ್ನು, ಶಿಕ್ಷಣ ತಜ್ಞರನ್ನು, ಅಡ್ಮಿನಿಸ್ಟ್ರೇಟರ್ಸ್‌ನ್ನು, ಅಕಾಡೆಮಿಶಿಯನ್ಸ್‌ನ್ನು ವಿದ್ಯಾರ್ಥಿಗಳನ್ನು, ಪ್ರೊಫೆಸರ್ಸ್‌ನ್ನು ಹೀಗೆ ಬಹಳಷ್ಟು ಜನರನ್ನು ವಿಧವಿಧವಾಗಿ ಸಂದರ್ಶನ ಮಾಡಿ ವರದಿಯನ್ನು ಕೊಟ್ಟಿದ್ದಾರೆ. ಈ ಸಮಿತಿ ಯಾರನ್ನಾರನ್ನು ಸಂದರ್ಶನ ಮಾಡಿ ಭೇಟಿ ಮಾಡಿದೆ ಅವರಲ್ಲಿ ಕೆಲವು ಹೆಸರನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ನಾನು ಭಾವಿಸಿದ್ದೇನೆ.

> "The Commission is particularly grateful to Dr. Raja Ramanna, Director, National Institute of Advanced Studies, Bangalore; Dr. G Padmanabhan, Director, Administration, Indian Institute of Science; Dr. D.M. Nanjundappa, Chairman, Railway Freight and Tariffs Committee; Prof. C.D. Narasimhaiah, Mysore; Justice E.S. Venkataramaiah, Retd. Chief Justice, Supreme Court. The Commission is also grateful to the Vice Chancellors of various universities - Dr. N.R Shetty, Sri Rame Gowda, Dr. Gajendragad, Dr. Savadatti, Dr. Madaiah and some other Vice-Cahncellors."

ಇಷ್ಟೇ ಅಲ್ಲದೆ, ಪ್ರತಿಯೊಂದು ವಿಶ್ವವಿದ್ಯಾನಿಲಯಕ್ಕೂ ಅವರು ಭೇಟಿ ಕೊಟ್ಟು ಅಲ್ಲಿರತಕ್ಕಂಥ ಪ್ರೊಫೆಸರ್‌ಗಳನ್ನು, ವಿದ್ಯಾರ್ಥಿಗಳನ್ನು, ಡೀನ್ಸ್ ಅವರನ್ನು, ನಾನ್ ಟೀಚಿಂಗ್‌ನಲ್ಲಿ ಇರತಕ್ಕಂಥ ಜನರನ್ನು, ಹೀಗೆ ಇವರೆಲ್ಲರನ್ನು ಸಂಪರ್ಕ ಮಾಡಿ, ಅವರ ಅಭಿಪ್ರಾಯಗಳನ್ನು ಕೂಡ ಸಂಗ್ರಹಣೆ ಮಾಡಿ ಸುಮಾರು 80 ಶಿಫಾರಸ್ಸುಗಳನ್ನು ಕೊಟ್ಟಿದ್ದಾರೆ. ಪ್ರಮುಖವಾಗಿ ಈ ಮಸೂದೆಯಲ್ಲಿ ಹಂದಿರತಕ್ಕಂಥ ವಿಷಯಗಳನ್ನು ನಾನು ಪ್ರಸ್ತಾಪ ಮಾಡಿ ನಂತರ ಚರ್ಚೆ ಮಾಡುವುದಕ್ಕೆ ಸಲಹೆಸೂಚನೆಗಳನ್ನು ಕೊಡುವುದಕ್ಕೆ ಗೌರವಾನ್ವಿತ ಸದಸ್ಯರುಗಳಿಗೆ ಅವಕಾಶವನ್ನು ಕೊಡುತ್ತೇನೆ. ವಿಂದರೆ ಇಲ್ಲಿ ಅಭಾವವಿದ್ದು ಅದರ ಅರಿವು ನನಗಿದೆ. ಮೊದಲನೆಯದಾಗಿ, ವಿಶ್ವವಿದ್ಯಾನಿಲಯದ ಅಡ್ಮಿನಿಸ್ಟ್ರೇಷನ್ ಸೆಟಪ್‌ನಲ್ಲಿ, ಅಕಾಡೆಮಿಕ್ ಬಾಡೀಸ್‌ನಲ್ಲಿ 3 ಅಂಗಾಂಗಗಳು ಇರತಕ್ಕಂಥದ್ದಾಗಿದೆ.

5.50 ಪಿ.ಎಂ.

(1) ಅಕಾಡೆಮಿಕ್ ಕೌನ್ಸಿಲ್ (2) ಸೆನೆಟ್ (3) ಸಿಂಡಿಕೇಟ್

The role of the academic council, Senate and Syndicate is defined already. ಇದನ್ನು ನಾವು ಪರೀಕ್ಷೆ ಮಾಡಿ ನೋಡಿದಾಗ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ, ಯಾವ ಯಾವ ಚರ್ಚೆ ನಡೆಯುತ್ತಿವೆ ಅದೇ ಚರ್ಚೆ ಪುನಃ ಸೆನೆಟ್‌ನಲ್ಲಿ, ಸಿಂಡಿಕೇಟ್‌ನಲ್ಲಿ ನಡೆಯುತ್ತದೆ. ನವನೀತರಾವ್ ಕಮಿಟಿ ಕೂಡ ಈ ಎಲ್ಲವನ್ನೂ ಪರೀಕ್ಷೆ ಮಾಡಿ ಈ ಮೂರು ಬಾಡಿಗಳಿಗಿರುವ ಪವರ್ ಏನಿದೆ, ಇದರ ಅವಶ್ಯಕತೆ ಇದೆಯೋ ಇಲ್ಲವೋ, ಇದು ಎಲ್ಲೋ ಒಂದು ಕಡೆ ಡಬ್ಲಿಂಗ್ ಆಗುತ್ತದೆ, ಈ ಸೆನೆಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಎನ್ನುವುದು ಒಂದೇ ಒಂದು ಕೆಲಸ ಮಾಡುವುದಕ್ಕೆ ಎರಡು ಮೂರು ಸಲ ಚರ್ಚೆ ನಡೆಯುತ್ತವೆ ಎಂದು ಇವುಗಳ ಬಗ್ಗೆ ಬಹಳಷ್ಟು ದೀರ್ಘವಾಗಿ ಪರೀಕ್ಷೆ ಮಾಡಿ ನೋಡಿ, ಸೆನೆಟ್ ನ ಅವಶ್ಯಕತೆ ಇಲ್ಲ ಎನ್ನುವಂಥ ಬಹಳ ಮಹತ್ತರವಾದ ಶಿಫಾರಸ್ಸುಗಳನ್ನು ಮಾಡಿದ್ದಾರೆ. ನಾವು ಇದನ್ನು ಪರಿಶೀಲಿಸಿ, ಅಕಾಡೆಮಿಕ್ ಕೌನ್ಸಿಲ್ ಮತ್ತು ಸೆನೆಟ್‌ನಲ್ಲಿ ಯಾವ ಯಾವ ಕ್ಲಾಸ್‌ನಲ್ಲಿ ಚರ್ಚೆಯಾಗುತ್ತಿದೆಯೆಂದು ವಿಚಾರ ಮಾಡಿದಾಗ ಈ ಸೆನೆಟ್ ಬೇಡ ಎಂದು ತೀರ್ಮಾನಿಸಿ ಇದನ್ನು ರದ್ದುಪಡಿಸಿದ್ದೇವೆ. ತಮಗೂ ಕೂಡ ವಿಶ್ವವಿದ್ಯಾನಿಲಯಗಳ ಬಗ್ಗೆ ಹಾಗೂ ಅವುಗಳ ಕೆಲಸ ಕಾರ್ಯಗಳ ಬಗ್ಗೆ ಪರಿಚಯವಿರುತ್ತದೆ. ಅಕಾಡೆಮಿಕ್ ಕೌನ್ಸಿಲ್‌ಗಳಲ್ಲಿ ಸುಮಾರು 200ಕ್ಕೂ ಹೆಚ್ಚು ಸದಸ್ಯರು ಇರುತ್ತಾರೆ, ಧಾರವಾಡ ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ 200, ಮೈಸೂರು ವಿಶ್ವವಿದ್ಯಾನಿಲಯದಲ್ಲೂ 100ಕ್ಕೂ ಹೆಚ್ಚು ಜನ ಸದಸ್ಯರು ಇದ್ದಾರೆ. ಈ ರೀತಿಯಾಗಿ ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಇಷ್ಟೊಂದು ಜನ ಸದಸ್ಯರು ಇರುವ ಅವಶ್ಯಕತೆ ಏನಿದೆ? ಇದರಲ್ಲಿ ಏನು ಚರ್ಚೆಯಾಗುತ್ತಿದೆ ಎಂದು ನಾವು ಈ ಬಗ್ಗೆ ಅಕಾಡೆಮಿಕ್ ಕೌನ್ಸಿಲ್‌ನಲ್ಲಾದ ನಿರ್ಣಯಗಳನ್ನು ನೋಡಿದಾಗ ಅಲ್ಲಿ

ಆಗಿರುವ ಚರ್ಚೆಗಳನ್ನು ನೋಡಿದಾಗ ಯಾರೋ ನಾಲ್ಕು ಜನ ಸದಸ್ಯರು ಭಾಗವಹಿಸಿ, ಯಾವುದೋ ಒಂದು ವಿಚಾರವನ್ನು ಮಾತನಾಡುವುದನ್ನು ಬಿಟ್ಟರೆ, ಸಮಗ್ರವಾಗಿ ಯಾವುದೇ ಒಂದು ಅಕಾಡೆಮಿಕ್ ವಿಚಾರವನ್ನು ಇವರು ಚರ್ಚೆ ಮಾಡಿರುವುದಿಲ್ಲ. ಈ ಎಲ್ಲಾ ಕಾರಣಕ್ಕೆ ಅಕಾಡೆಮಿಕ್ ಕೌನ್ಸಿಲ್‌ನ ಸಂಖ್ಯೆ ಎಷ್ಟಿದೆ ಅದರ ಸಂಖ್ಯೆಯನ್ನು ಕೂಡ ನಾವು 60 ರಿಂದ 50ಕ್ಕೆ ಇಳಿಸಿದ್ದೇವೆ. ಮತ್ತೊಂದು ಬಹಳ ಪ್ರಮುಖವಾದ ವಿಚಾರ ಏನೆಂದರೆ, ನನಗೆ ತಿಳಿದಿರುವಂತೆ ಈ ವಿಷಯ ಇಂದು ಸಾರ್ವಜನಿಕರಲ್ಲಿ, ಬಹಳ ವಿಶೇಷವಾಗಿ ಚರ್ಚೆಯಾಗುತ್ತಿದೆ ಅದರಲ್ಲೂ ಪತ್ರಿಕೆಗಳಲ್ಲಿ, ಇದು ಏನೋ ಒಂದು ದೊಡ್ಡ ಅನಾಹುತ ನಡೆದಿದೆ ಎನ್ನುವ ರೀತಿಯಲ್ಲಿರುವುದನ್ನು ನಾನು ಓದಿದ್ದೇನೆ. ಹೀಗಿದ್ದರೂ ಕೂಡ ನೀವು ಬಹಳ ಒಳ್ಳೆಯ ತೀರ್ಮಾನ ಮಾಡಿದ್ದೀರಿ, ಸರ್ಕಾರ ಎಂದರೆ ಇದಕ್ಕೆ ಏನಾದರೊಂದು ಮಹತ್ವ ಇರಬೇಕು ಎನ್ನುವ ಮೆಚ್ಚುಗೆಯ ಮಾತುಗಳನ್ನು ಕೂಡ ಕೇಳಿದ್ದೇನೆ. ವಿಶ್ವವಿದ್ಯಾನಿಲಯದ ಜವಾಬ್ದಾರಿಯನ್ನು ಹೊತ್ತು ತೀರ್ಮಾನ ಮಾಡುವಂಥ ಉಪ ಕುಲಪತಿಯವರನ್ನು ನೇಮಕ ಮಾಡುವಂಥ ಅಧಿಕಾರ ಕುಲಪತಿಗಳಿಗೆ ಏನಿತ್ತೊ ನಾವು ಅದನ್ನೇ ಮುಂದುವರಿಸಿದ್ದೇವೆ. ಇದರ ಬಗ್ಗೆ ಪತ್ರಿಕೆಗಳಲ್ಲಿ, ಉಪಕುಲಪತಿಗಳನ್ನು ಮೊಟಕುಗೊಳಿಸಿದರು ಎಂದು ಏನು ಬರುತ್ತದೆ ಅದು ಸರಿಯಲ್ಲ. ನಾವು ಅಲ್ಲಿ ಸರ್ಚ್ ಕಮಿಟಿಯನ್ನು ಮಾಡಬೇಕಾಗುತ್ತದೆ. ಸರ್ಕಾರ ಹಣ ಹಾಗೂ ಭೂಮಿಕೊಡುವುದರ ಜೊತೆಗೆ ಯಾವಾದರೂ ಸದಸ್ಯರು ವಿಶ್ವವಿದ್ಯಾನಿಲಯದ ಬಗ್ಗೆ ಪ್ರಶ್ನೆ ಕೇಳಿದಾಗ ಸರಿಯಾದ ಉತ್ತರ ಹೇಳುವುದಕ್ಕೆ ಗುರುತರವಾದ ಜವಾಬ್ದಾರಿಯನ್ನು ಸರ್ಕಾರ ಹೊಂದಿರುತ್ತದೆ. ಈ ಉದ್ದೇಶದಿಂದ ಇವತ್ತು ಒಟ್ಟು ಉಪಕುಲಪತಿಗಳನ್ನು ನೇಮಕ ಮಾಡುವಾಗ ಸರ್ಚ್ ಕಮಿಟಿಯಲ್ಲಿ, ಸರ್ಕಾರ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದು ಸಂವಿಧಾನದ ವಿರುದ್ಧವಾಗಿದೆ ಸಂವಿಧಾನದ ಹಕ್ಕನ್ನೇ ಮೊಟಕುಗೊಳಿಸಿದರು ಎನ್ನುವಂಥ ಮಾತು ಸರಿ ಕಾಣಿಸುವುದಿಲ್ಲ. ಈ ರೀತಿಯ ಅನೇಕ ಪ್ರಯತ್ನದ ಫಲವಾಗಿ ನಮ್ಮ ರಾಷ್ಟ್ರದ ಪಕ್ಕದಲ್ಲಿರುವ ಆಂಧ್ರಪ್ರದೇಶದಲ್ಲಿ ಅಲ್ಲಿನ ಸರ್ಕಾರ 1993ರಲ್ಲಿ ಇದನ್ನು ಮಾಡಿದ್ದಾರೆ. 1993 ರಿಂದ ಇಲ್ಲಿಯವರೆವಿಗೂ ಸುಮಾರು ಹತ್ತಾರು ಉಪಕುಲಪತಿಗಳನ್ನು ಅಲ್ಲಿನ ಸರ್ಕಾರ ಈ ಸರ್ಚ್ ಕಮಿಟಿಯ ಮೂಲಕ ಕುಲಪತಿಗಳಿಗೆ ವಿಷಯವನ್ನು ನಾಮಕರಣ ಮಾಡಿರುವುದರಿಂದ ಅಲ್ಲಿ ಯಾವುದೇ ರೀತಿಯ ತೊಂದರೆಯಾಗಿಲ್ಲ ಜನರ ಮನಸ್ಸಿನಲ್ಲಿ, ಅಥವಾ ವಿಶ್ವವಿದ್ಯಾನಿಲಯದವರಿಗೆ ಹಾಗೂ ಸದಸ್ಯರಿಗೆ ಏನು ಆತಂಕ ಇಲ್ಲ, ಇದೊಂದು ರಾಜಕೀಯವಾಗುತ್ತದೆ, ರಾಜಕೀಯ ನೇಮಕವಾಗುತ್ತದೆ ಎನ್ನುವ ಮಾತೇನಿದೆ, ಇದು ಒಂದು ವೇಳೆ ನಿಜವಾಗಿದ್ದರೆ ಆಂಧ್ರಪ್ರದೇಶದಲ್ಲಿ ಇದರ ಫಲಿತಾಂಶ ನಮಗೆ ಗೊತ್ತಾಗುತ್ತಿತ್ತು. ಆದ್ದರಿಂದ, ನಾವು ಇಲ್ಲಿ ಕೂಡ ಅಂಥ ಬದಲಾವಣೆಯನ್ನು ತಂದಿದ್ದೇವೆ. ಮತ್ತೊಂದು ಪ್ರಮುಖವಾದ ವಿಚಾರ ಏನೆಂದರೆ, ವಿಶ್ವವಿದ್ಯಾನಿಲಯದಲ್ಲಿರುವ ಅಕಾಡೆಮಿಕ್ ಕೌನ್ಸಿಲ್, ಸೆನೆಟ್‌ಗಳಿಗೆ ಚುನಾವಣೆ ಮಾಡುತ್ತಾರೆ. ಇವತ್ತು ನಾವು ಈ ಮಸೂದೆಯಲ್ಲಿ ಆ

ಚುನಾವಣೆಗಳನ್ನು ತೆಗೆದು ಹಾಕಿದ್ದೇವೆ. ಇದರ ಉದ್ದೇಶ ಏನೆಂದರೆ, ವಿಶ್ವವಿದ್ಯಾನಿಲಯ ಅಂದರೆ ಅದಕ್ಕೆ ಅರ್ಥವೇ ಬೇರೆ ಇದೆ. it is purely academic in nature. ಅಲ್ಲಿ ಚುನಾವಣೆ ನಡೆದಾಗ ಅಲ್ಲಾಗುವ ಹೊಡೆದಾಟ, ಬಡಿದಾಟ, ಹಣ ಖರ್ಚಾಗುವುದು, ವಿದ್ಯಾರ್ಥಿಗಳಾಗಿರುವ ತೊಂದರೆ, ಇವುಗಳನ್ನೆಲ್ಲಾ ನೋಡಿದರೆ ವಿದ್ಯಾರ್ಥಿಗಳ ತೊಂದರೆ ಹೇಳತೀರದಾಗಿದೆ. ನಮ್ಮ ವಿಧಾನಸಭೆ ಮತ್ತು ಲೋಕಸಭೆ ಚುನಾವಣೆಗಿಂತ ದೊಡ್ಡ ಪ್ರಮಾಣದಲ್ಲಿ ಅಲ್ಲಿ ಚುನಾವಣೆ ನಡೆಯುತ್ತಿವೆ. ಅಲ್ಲಿ, ಅಕಾಡೆಮಿಕ್ ವಾತಾವರಣ ಹಿಟ್ಟು ಹೋಗುತ್ತದೆಂದು ನನ್ನ ಅನುಭವದಲ್ಲಿ ಹೇಳಬೇಕಾಗುತ್ತದೆ. ಈ ವಿಚಾರ ಕೂಡ ನಾನೀಗಾಗಲೇ ಕಮಿಟಿಯ ತೀರ್ಮಾನದಲ್ಲಿದೆ. Then about curriculum development. ಇನ್ನೂ ಪಕ್ಷ ಮೂರು ವರ್ಷಕ್ಕಾದರೂ ಇರುವ ಪಠ್ಯಕ್ರಮವನ್ನು ಬದಲಾವಣೆ ಮಾಡದೇ ಹೋದರೆ ವಿಶ್ವವಿದ್ಯಾನಿಲಯಗಳಲ್ಲಿ ಅದೆಂಥ ಪಾಠ ಹೇಳಿಕೊಡುವುದು? ಇದಕ್ಕಾಗಿ ನಾವು ಇಂದು curriculum Development Board ಎನ್ನುವುದನ್ನು ಆರಂಭಿಸಿದ್ದೇವೆ. ಇದರ ಜೊತೆಗೆ Inter-disciplinary Board, Inter University Consultative Board and Academic Audit Cell - ಇವುಗಳನ್ನು ಮಾಡಿದ್ದೇವೆ. ಅಂದರೆ ಯಾವ ಉಪಾಧ್ಯಾಯರು ಎಷ್ಟು ಪಾಠ ಮಾಡುತ್ತಾರೆ? ಯಾವಾಗ ಪಾಠ ಮಾಡುತ್ತಾರೆ? ಅವರು ಪರೀಕ್ಷೆ ಯಾವ ರೀತಿ ನಡೆಯುತ್ತಾರೆ? ಇದನ್ನೆಲ್ಲಾ ನೋಡಿಕೊಳ್ಳುವುದಕ್ಕೆ ಅಕಾಡೆಮಿಕ್ ಆಡಿಟ್ ಆಗದೇ ಇದ್ದರೆ ಹೇಗೆ? ಇವತ್ತು ನಮ್ಮ ಪದವೀಧರರ ಗುಣಮಟ್ಟವನ್ನು ಅಳೆಯುವುದಾದರೆ ಹೇಗೆ? ಸುಮ್ಮನೇ ನಾವು ಪರೀಕ್ಷೆ ಮಾಡಿ ಅಂಕಗಳನ್ನು ಕೊಟ್ಟು ಕಳುಹಿಸಿದರೆ ಸರಿಯಾದ ಗುಣಮಟ್ಟವನ್ನು ಅಳತೆ ಮಾಡಿದ ಹಾಗೆ ಆಗುವುದಿಲ್ಲವೆಂದು ಯೋಚಿಸಿ ಈ ಮೂಲಕದಲ್ಲಿ ಅಕಾಡೆಮಿಕ್ ಆಡಿಟ್ ಸೆಲ್ ಎನ್ನುವುದನ್ನು ಕೂಡ ನಾವಿಂದು ಆರಂಭಿಸಿದ್ದೇವೆ. Adoption and enforcement of the Reservation Roster for direct recruitment and promotion has been made mandatory. ಇವತ್ತು ಯಾವುದೇ ವಿಶ್ವವಿದ್ಯಾನಿಲಯದ ಅಂಕಅಂಶವನ್ನು ತೆಗೆದು ನೋಡಿದಾಗ ಪರಿಶಿಷ್ಟಜಾತಿ ಮತ್ತು ವರ್ಗಕ್ಕೆ ಎಷ್ಟು ಕೊಟ್ಟಿದ್ದಾರೆ, ಓ.ಬಿ.ಸಿ.ಗೆ ಎಷ್ಟು ಕೊಟ್ಟಿದ್ದಾರೆ? ನೇರ ನೇಮಕಾತಿಯಲ್ಲಿ ಎಷ್ಟು ಕೊಟ್ಟಿದ್ದಾರೆ? ಬಡ್ತಿಯಲ್ಲಿ ಎಷ್ಟು ಕೊಟ್ಟಿದ್ದಾರೆ? ಎಂಬ ಈ ಎಲ್ಲ ಅಂಶವನ್ನು ನಾವು ಗಮನಿಸಿದರೆ ಇವತ್ತಿಗೂ ಕೂಡ ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಶೇಕಡ 18ರ ಮೀಸಲಾತಿ ಸಿಕ್ಕಿಲ್ಲ. ಹಿಂದುಳಿದ ವರ್ಗಗಳಿಗೆ ಇಪ್ಪತ್ತರ ಮೀಸಲಾತಿ ಸರಿಯಾಗಿ ಆಗಿಲ್ಲ. ಇದು ಎಲ್ಲಾ, ಏಕೆ ಆಗುತ್ತದೆ? ಈ ಉದ್ದೇಶಕ್ಕಾಗಿ ನಾವಿಂದು we have made it a mandatory provision ಮತ್ತು ಕಾಲೇಜಿಗೆ ಅಫಿಲಿಯೇಷನ್ ಕೊಡುವಾಗ, affiliation of new colleges and courses has been streamlined. ಯಾರಾದರೂ ಒಂದು ಹೊಸ ವಿಷಯಕ್ಕಾಗಿ ಅರ್ಜಿ ಹಾಕಿದಾಗ ವಿಶ್ವವಿದ್ಯಾಲಯಕ್ಕೆ ಒಂದು ಕಮಿಟ್‌ಮೆಂಟ್, ಒಂದು ಜವಾಬ್ದಾರಿ ಇದ್ದು, ಹೊಸ ಕಾಲೇಜಿಗೆ ಅಫಿಲಿಯೇಷನ್ ಕೊಡುವಾಗ ಬಹಳ ಜವಾಬ್ದಾರಿಯಿಂದ

ನಡೆಮಟಿಳ್ಳಬೇಕಾಗುತ್ತದೆ. ಅದಕ್ಕೆ ಬೋರ್ಡಲ್ ಎನ್ಕ್ವೈರಿ ಕಮಿಟಿ ಹೋಗಿ ವಿವರವಾದ ವರದಿ ಕೊಡಬೇಕಾಗುತ್ತದೆ. ಈ ವರದಿ ಅಕಾಡೆಮಿಕ್ ಕೌನ್ಸಿಲ್‌ಗೆ ಬಂದಾಗ, ಎಲ್.ಐ.ಸಿಯವರು ಏನಾದರೂ ತಪ್ಪು ವರದಿ ಕೊಟ್ಟಿದ್ದಾರೆಂದು ಅವರ ಗಮನಕ್ಕೆ ಬಂದಾಗ, that Academic Council can cause another inspection if need be and make a recommendation to the Syndicate. ಇಂಥ ಒಂದು ಉತ್ತಮವಾದ ಪ್ರಾವಿಷನ್ ಮಾಡಿದ್ದೇವೆ. ಮತ್ತೊಂದು ಮಹತ್ವಕಾಂಕ್ಷೆಯ ವಿಷಯ ಏನೆಂದರೆ, ತಮ್ಮೆಲ್ಲರಿಗೂ ಗೊತ್ತಿರುವಂತೆ ನಮ್ಮ ರಾಜ್ಯದಿಂದ ಶಿಕ್ಷಣ ಪ್ರವಾಸಕ್ಕಾಗಿ ಹೊರಗೆಲ್ಲಿಗೆ ಹೋಗುತ್ತಿದೆ. ಅನೇಕ ಇತರೆ ದೇಶ ಹಾಗೂ ರಾಜ್ಯಗಳಿಂದ ನಮ್ಮ ವಿಶ್ವವಿದ್ಯಾನಿಲಯಗಳಿಗೆ ಬರುತ್ತಿದ್ದಾರೆ. ತಾವು ಬಹುಶ: ಕೇಳಿರಬಹುದು, ಅನಧಿಕೃತವಾಗಿ ಬೇರೆ ಬೇರೆ ಸಂಸ್ಥೆಗಳು ವಿದೇಶಿ ಸಹಯೋಗವನ್ನೊಡನೆ ಮಾಡಿಕೊಂಡು ಒಂದು ಬೋರ್ಡ್ ಹಾಕಿಕೊಳ್ಳುತ್ತಾರೆ. ಕಳೆದ ಒಂದು ವರ್ಷದಿಂದ ನಾವು ಇದನ್ನು ಮಾನಿಟರ್ ಮಾಡಿ ಇದನ್ನು ನಿಲ್ಲಿಸುವ ಪ್ರಯತ್ನವನ್ನು ಕೂಡ ಮಾಡಿದ್ದೇವೆ. ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಂದ, ಅಂದರೆ, ಜರ್ಮನಿ, ಫ್ರಾನ್ಸ್, ಆಸ್ಟ್ರೇಲಿಯಾ, ಯು.ಎಸ್.ಎ. ಈ ರೀತಿಯ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಂದ ನಮ್ಮ ವಿಶ್ವವಿದ್ಯಾಲಯಗಳಾದ ಮೈಸೂರು, ಬೆಂಗಳೂರು, ಕರ್ನಾಟಕ, ವಿಶ್ವವಿದ್ಯಾನಿಲಯ ಹಾಗೂ ಇತರೆ ವಿಶ್ವವಿದ್ಯಾನಿಲಯಗಳಲ್ಲಿ ಸಹಯೋಗದ ಕಾರ್ಯಕ್ರಮ, Twinning ಕಾರ್ಯಕ್ರಮ ಮಾಡಿಕೊಳ್ಳುವುದಕ್ಕೆ ನಮ್ಮಲ್ಲಿ ಇರತಕ್ಕಂಥ ಮಸೂದೆಯಲ್ಲಿ ಯಾವುದೇ ಪ್ರಾವಿಸನ್ ಇಲ್ಲ. ಹೈಟೆಕ್ ಕೋರ್ಸ್ ಅಥವಾ ಬಯೋ ಟೆಕ್ನಾಲಜಿ ಇರಬಹುದು ಅಥವಾ ಬೇರೆ ಯಾವುದೇ ರೀತಿಯ ಕೋರ್ಸ್‌ಗಳನ್ನು ವಿದೇಶಿ ವಿಶ್ವವಿದ್ಯಾನಿಲಯಗಳು ಕೋಲಾಬರೇಷನ್ ಪ್ರೋಗ್ರಾಮ್ ಮಾಡಿಕೊಳ್ಳುವುದಕ್ಕೆ ಕೂಡ ಇದರಲ್ಲಿ, ನಾವು ಅವಕಾಶ ಮಾಡಿಕೊಟ್ಟಿದ್ದೇವೆ. ಇಮತ್ತಿನ ದಿವಸ ಕಾನರಿ ಡಿಗ್ರಿ ಕೊಡುತ್ತೇವೆ. ಅಂದರೆ, ಡಿ.ಲಿಟ್ ಮತ್ತು ಡಾಕ್ಟರೇಟ್ ಪದವಿಯನ್ನು ಕೊಡುತ್ತಿದ್ದೇವೆ. ಇದು ತಮಗೂ ಮತ್ತು ಅನೇಕ ಗೌರವಾನ್ವಿತ ಸದಸ್ಯರೆಲ್ಲರಿಗೂ ಸಹ ಗೊತ್ತಿದೆ. ಈ ಪದವಿಯನ್ನು ಯಾವ ಕ್ವಾಲಿಟಿ ಜನರಿಗೆ ಮತ್ತು ಸಮಾಜದ ಯಾವ ಕ್ಷೇತ್ರದಲ್ಲಿ ಎಷ್ಟು ಸೇವೆಯನ್ನು ಮಾಡಿದ್ದಾರೆ ಎಂಬುದನ್ನು ನೋಡಿ ಡಾಕ್ಟರೇಟ್ ಅಥವಾ ಡಿ.ಲಿಟ್ ಪದವಿಯನ್ನು ಕೊಡಬೇಕಾಗುತ್ತದೆ. ಇವೆಲ್ಲವನ್ನು ನೋಡಿ ಕೊಡುವುದರಲ್ಲಿ, ನಿಜವಾದ ಅರ್ಥ ಇದೆ. ಅಥವಾ ಸಿಂಡಿಕೇಟ್‌ನಲ್ಲಿರತಕ್ಕಂಥ ನಾಲ್ಕು ಜನ ನಿರ್ಣಯ ತೆಗೆದುಕೊಂಡು ಡಾಕ್ಟರೇಟ್ ಕೊಡತಕ್ಕಂಥದರಲ್ಲಿ ಅರ್ಥ ಏನಿದೆ? ಆದ್ದರಿಂದ ಇದಕ್ಕೆ ಸ್ವಲ್ಪ ಕ್ವಾಲಿಟೇಟೀವ್ ಅಸೆಸ್‌ಮೆಂಟ್ ಆಗಬೇಕೆಂದು We have made it an exceptional provision in the Act. ಈ ವಿಶ್ವವಿದ್ಯಾಲಯಗಳನ್ನು ಓವರ್-ಸೀ ಮಾಡುವುದಕ್ಕೆ ಒಂದು ಇಂಟರ್ ಯೂನಿವರ್ಸಿಟಿ ಬೋರ್ಡ್ ಮಾಡಲಾಗಿದೆ. ಇಂಟರ್ ಯೂನಿವರ್ಸಿಟಿ ಬೋರ್ಡ್‌ನಲ್ಲಿ, ಅನೇಕ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾರೆ. ಇಮತ್ತಿನ ದಿವಸ ಸದರಿ ಬೋರ್ಡ್‌ನಲ್ಲಿ ಏನು ಒಂದು ನಿರ್ಣಯ ಆಗುತ್ತದೆ ಅದು it is not mandatory

on the part of the Universities. We cannot enforce those decisions on the Universities. ಅದಕ್ಕೋಸ್ಕರ ನಾವು ಏನು ಒಂದು ಪ್ರಾವಿಸನ್‌ನನ್ನು ತಂದಿದ್ದೇವೆ. ಎಂದರೆ, ಇಲ್ಲಿ ಬಹಳಷ್ಟು ಹಣವಿನ ವ್ಯವಹಾರಗಳು ಬರುತ್ತದೆ. ಹಾಗೆಯೇ ಹಣವನ್ನು ಖರ್ಚು ಮಾಡುವುದರ ಬಗ್ಗೆ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಇದಕ್ಕೆ ರಾಜ್ಯ ಸರ್ಕಾರದ ಅನುಮತಿಯನ್ನು ಪಡೆದುಕೊಂಡು We have made it a provision to enforce these recommendations on the Universities. ಶಿಕ್ಷಕರ ಮೇಲೆ ನನಗೆ ಬಹಳಷ್ಟು ಗೌರವ ಇದೆ. because I know that the teaching profession is a noble profession. ನಾನು ಕೂಡ ಎರಡು ವರ್ಷಗಳ ಕಾಲ ಶಿಕ್ಷಕನಾಗಿ ಕೆಲಸ ಮಾಡಿದ್ದೇನೆ. ಇವತ್ತಿನ ದಿವಸ ಪರೀಕ್ಷೆ ಬಂತು ಎಂದರೆ, ಅನೇಕ ಸಂದರ್ಭದಲ್ಲಿ, ಪೇಪ್ಸ್ ಅಥವಾ ಮೌಲ್ಯಮಾಪನವನ್ನು ಬಹಿಷ್ಕಾರ ಮಾಡುವುದು ಅಥವಾ ಪ್ರಶ್ನೆ ಪತ್ರಿಕೆಗಳನ್ನು ಸೆಟ್ ಮಾಡುವುದಿಲ್ಲವೆಂದು ಹೇಳತಕ್ಕಂಥ ಅನೇಕ ಸಮಸ್ಯೆಗಳು ಕೇವಲ ವಿದ್ಯಾರ್ಥಿಗಳಲ್ಲದೆ ವಿದ್ಯಾರ್ಥಿಗಳ ತಂದೆ-ತಾಯಿಗಳಿಗೆ ಮತ್ತು ಸಂಸ್ಥೆಯನ್ನು ನಡೆಸತಕ್ಕಂಥವರಿಗೆ ಹಾಗೂ ಇನ್ನು ಇತರರಿಗೂ ಸಹ ಒಂದು ರೀತಿಯಲ್ಲಿ ನೋವನ್ನು ಉಂಟು ಮಾಡತಕ್ಕಂಥ ಸನ್ನಿವೇಶವಾಗಿದೆ. ಬಹುಶಃ ಇದನ್ನು ಅನುಭವಿಸಿದ ವಿದ್ಯಾರ್ಥಿಗಳಿಗೆ ಇದು ಚೆನ್ನಾಗಿ ಅರ್ಥವಾಗುತ್ತದೆ. They have defined what is teaching. Examination, evaluatiion, setting up the question papers, it is all part of the teaching. ಎನ್ನತಕ್ಕಂಥದನ್ನು ಯೂನಿವರ್ಸಿಟಿ ಗ್ರಾಂಟ್ ಕಮೀಷನ್‌ರವರು ಒಂದು ರೂಲ್ ಅನ್ನು ಮಾಡಿದ್ದಾರೆ. ಇದನ್ನು ಕೂಡ ನಾವು ಈ ಬಿಲ್‌ನಲ್ಲಿ ಸೇರಿಸಲಾಗಿದೆ. ಇನ್ನು ಖಾಸಗಿ ಟ್ಯೂಷನ್ ಬಗ್ಗೆ ಹೇಳುವುದಕ್ಕೆ ನಮಗೆ ಅಸಹ್ಯವಾಗುತ್ತದೆ. ನಮ್ಮ ರಾಜ್ಯದಲ್ಲಿಯೂ ಕೂಡ ಕಾಲೇಜು ಶಿಕ್ಷಕರಿಗೆ ಯು.ಜಿ.ಸಿ. ಸ್ಕೇಲ್ ಅನ್ನು ಕೊಡುತ್ತಿದ್ದೇವೆ. ಇದರಿಂದ ನಮ್ಮ ರಾಜ್ಯದ ಶಿಕ್ಷಕರಿಗೆ ಹೆಚ್ಚಿನ ಮಟ್ಟದಲ್ಲಿ ಸಂಬಳ ಬರುತ್ತಿದೆ. ಆದರೆ ಕಾಲೇಜಿನಲ್ಲಿ ಮಾಡತಕ್ಕಂಥ ಪಾಠವನ್ನು ಮತ್ತೆ ಮನೆಗಳಿಗೆ ವಿದ್ಯಾರ್ಥಿಗಳನ್ನು ಕರೆಸಿಕೊಂಡು ಟ್ಯೂಷನ್ ಮಾಡತಕ್ಕಂಥ ಪದ್ಧತಿ ನಮ್ಮಲ್ಲಿ ಜಾಸ್ತಿ ಇದೆ. ೧೬೦ ರೂಪಾಯಿ ಇದ್ದಂಥ ಗ್ರಿಗ್ರಿ ಫೀಯನ್ನು ನಾವು ಸುಮಾರು ೩೫೦ ರಿಂದ ೪೦೦ ರೂಪಾಯಿಗಳ ವರೆಗೆ ಜಾಸ್ತಿ ಮಾಡಿದಾಗ ಜನರು ಇದಕ್ಕೋಸ್ಕರ ಬೊಬ್ಬೆ ಹೊಡೆದರು. ಇವತ್ತಿನ ದಿವಸ ಪ್ರೈವೇಟ್ ಟ್ಯೂಷನ್‌ನಲ್ಲಿ, ಒಂದು ವಿಷಯಕ್ಕೆ ಕನಿಷ್ಠ ಸುಮಾರು ೪೦೦ ರಿಂದ ೫೦೦ ರೂಪಾಯಿಗಳವರೆಗೆ ಕೊಡುತ್ತಾರೆ. ಇಂಥ ಒಂದು ಪರಿಸ್ಥಿತಿ ಇನ್ನು ಮುಂದೆ ಆಗಬಾರದೆಂದು ಸರ್ಕಾರ ಗಮನ ಹರಿಸಿ, ಈಗ ಪ್ರೈವೇಟ್ ಟ್ಯೂಷನ್‌ನನ್ನು ನಾವು ಬ್ಯಾನ್ ಮಾಡಿದ್ದೇವೆ. ಒಂದು ವೇಳೆ ನಾವು ಮಾಡುತ್ತೇವೆಂದು ಎಲ್ಲಾದರೂ ಖಾಸಗಿ ಟ್ಯೂಷನ್‌ನನ್ನು ಮಾಡಿದರೆ ಅಂಥವರಿಗೆ ಶಿಕ್ಷೆಯನ್ನು ವಿಧಿಸತಕ್ಕಂಥ ಒಂದು ಕ್ಲಾಸ್ ಅನ್ನು ಇದರಲ್ಲಿ ಸೇರಿಸಿದ್ದೇವೆ. ಇವತ್ತಿನ ದಿವಸ ತಮಗೆಲ್ಲ ಗೊತ್ತಿರುವ ಹಾಗೆ ಒಂದು ವಿಶ್ವವಿದ್ಯಾಲಯ ಪ್ರಾರಂಭವಾಗುವಾಗ ಸರ್ಕಾರ ಒಂದೊಂದು ಸಾರಿ ಸಾವಿರಾರು ಎಕರೆ ಜಮೀನನ್ನು ಕೊಡುತ್ತದೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ವಿಶ್ವವಿದ್ಯಾಲಯವನ್ನು ಕಟ್ಟುವಾಗ ಸಾವಿರಾರು ಎಕರೆಯನ್ನು ಅಕ್ವಯರ್ ಮಾಡಿ, ಇದಕ್ಕೆ ತಗಲುವ ಖರ್ಚನ್ನು ಸರ್ಕಾರ ಕೊಟ್ಟು ಒಂದು ನಿಗದಿತ ಜಾಗವನ್ನು ಅವರ ಸ್ವಾಧೀನಕ್ಕೆ

ಕೊಟ್ಟಿದ್ದೇವೆ. ಇಂಥ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ನಡವಳಿಕೆಯಲ್ಲಿ ಯಾವತ್ತೂ ಒಂದು ದಿವಸ ಅಲ್ಲಿರತಕ್ಕಂಥ ಸಿಂಡಿಕೇಟ್ ಒಂದು ನಿರ್ಣಯವನ್ನು ಮಾಡಿ ಯಾರಿಗೋ ಒಂದು ಐದು ಎಕರೆ ಜಮೀನನ್ನು ಕೊಟ್ಟು ಬಿಡುತ್ತಾರೆ. ಇವತ್ತಿನ ದಿವಸ ಇಂಥಾದೆಲ್ಲಾ ಆಗಬಾರದು ಎನ್ನತಕ್ಕಂಥ ದೃಷ್ಟಿಯಿಂದ We have brought in a provision to make it a prior approval of the Government to release these kinds of lands, ಎಂದು ಮಾಡಿದ್ದೇವೆ. ನಾನು ತಪ್ಪಾಗಲೀ ಹೇಳಿರುತಕ್ಕಂಥ ಪ್ರಮುಖ ಬದಲಾವಣೆಗಳನ್ನು ಈ ವಿಧೇಯಕದಲ್ಲಿ ನಾವು ತಂದಿದ್ದೇವೆ. ಇನ್ನು ಕೂಡ ಸಣ್ಣಪುಟ್ಟ ಬದಲಾವಣೆಗಳಿವೆ. ಆದರೆ, ಸಮಯದ ಅಭಾವದಿಂದ ನಾನು ಎಲ್ಲವನ್ನೂ ಕೂಡ ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ಶಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಬದಲಾವಣೆ ಆಗುತ್ತಿರುವ ಒಂದು ಉದ್ದೇಶವನ್ನು ನೋಡಿಕೊಂಡು ಈ ಒಂದು ಮಸೂದೆಯನ್ನು ತಂದಿದ್ದೇವೆ. ಶಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ನಾವೆಲ್ಲರೂ ಕೂಡ ಸೇರಿಕೊಳ್ಳಬೇಕಾಗುತ್ತದೆ. ನಾನು ಮೊದಲು ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಿದ್ದೇನೆ. ನಾನು ಸಚಿವನಾದ ಮೇಲೆ ಸುಮಾರು ೫೦ ರಿಂದ ೬೦ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ್ದೇನೆ. ಇವತ್ತಿನ ದಿವಸ ಏನೋ ಒಂದು ಮಸೂದೆಯನ್ನು ತಂದು, ಯಾರಿಗೋ ಇರದಕ್ಕಂಥ ಅಧಿಕಾರವನ್ನು ಸೊತಕು ಮಾಡಿತಕ್ಕಂಥದ್ದಾಗಲಿ ಅಥವಾ ಬಹಳ ದೊಡ್ಡ ಬದಲಾವಣೆಯನ್ನು ಇವರು ತಂದಿದ್ದಾರೆ ಎಂದು ಅನ್ನಿಸಿಕೊಳ್ಳುವಂಥ ಉದ್ದೇಶ ನನಗೆ ಇಲ್ಲ. ಇವತ್ತಿನ ದಿವಸ ನಾವು ಪ್ರಾಥಮಿಕ ಶಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದೇವೆ. ಶಕ್ಷಣದಲ್ಲಿ, ಎಂಡ್ ಪ್ರಾಡಕ್ಟ್ ಆದ ಉನ್ನತ ಶಕ್ಷಣವು ಸರಿ ಇಲ್ಲದಿದ್ದರೆ ಏನು ಪ್ರಯೋಜನ ಆಗುವುದಿಲ್ಲ. ಇವತ್ತಿನ ದಿವಸ ನಾವೆಲ್ಲ ಮಾಹಿತಿ ತಂತ್ರಜ್ಞಾನ ಕ್ರಾಂತಿಯ ಬಗ್ಗೆ ಮಾತನಾಡುತ್ತೇವೆ. ನಮ್ಮ ರಾಜ್ಯದ ವಿದ್ಯಾರ್ಥಿಗಳು ಅಮೇರಿಕಾದ ಸಿಲಿಕಾನ್ ವ್ಯಾಲಿಯಲ್ಲಿ ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದಾರೆ. ಅಲ್ಲಿಂದ ಸಾವಿರಾರು ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯಕ್ಕೆ ತುಮಕೂರುತ್ತಿದ್ದಾರೆಂದು ನಾವೆಲ್ಲಾ ಹೇಳುತ್ತೇವೆ. ಆದ್ದರಿಂದ ಕ್ವಾಲಿಟೀವ್ ಅಸೆಟ್ಸ್‌ನ್ನು ಇವತ್ತು ಆದರೂ ನಾವು ಅರ್ಥ ಮಾಡಿಕೊಂಡು ಅದನ್ನು ಕ್ಯಾಪಿಟಲೈಜ್ ಮಾಡದೇ ಇದ್ದರೆ ಬಹುಶಃ ನಾವು ಕೊಡತಕ್ಕಂಥ ಶಕ್ಷಣಕ್ಕೆ ಯಾವುದೇ ರೀತಿಯ ಅರ್ಥ ಬರುವುದಿಲ್ಲ. ಇವತ್ತಿನ ದಿವಸ ನಾವು ಹಿಸ್ಟ್ರಿ, ಎಕನಾಮಿಕ್ಸ್ ಮತ್ತು ಪೊಲಿಟಿಕಲ್ ಸೈನ್ಸ್‌ಗೆ ಸಂಬಂಧಪಟ್ಟಂತೆ ಡಿಗ್ರಿಯನ್ನು ಕೊಡುತ್ತೇವೆ. ಆದರೆ ಯಾವ ಉದ್ದೇಶಕ್ಕಾಗಿ ಇದನ್ನು ಕೊಡುತ್ತಿದ್ದೇವೆ ಎನ್ನತಕ್ಕಂಥದ್ದು ಇದುವರೆಗೂ ಅರ್ಥವಾಗುತ್ತಿಲ್ಲ. ಇವತ್ತಿನ ದಿವಸ ಬಿ.ಎ. ಡಿಗ್ರಿ ಪಡೆದಂಥವನು ಮೊದಲು ಅವನು ತನ್ನ ಊಟಕ್ಕಾಗಿ ದುಡಿಯಬೇಕಾಗುತ್ತದೆ. ಎರಡನೆಯದಾಗಿ ಸಮಾಜಕ್ಕೆ ಇದರ ಉಪಯೋಗ ಆಗಬೇಕಾಗಿದೆ. ಆದರೆ ಇವತ್ತಿನ ದಿವಸ ನಾವು ಡಿಗ್ರಿ ಕೊಡುವುದರಿಂದ ಈ ಎರಡು ಕೆಲಸವು ಕೂಡ ಆಗುತ್ತಿಲ್ಲ. ಈ ಒಂದು ಕಾರಣಕ್ಕಾಗಿ ಇವತ್ತು ಏನು ಒಂದು ಬದಲಾವಣೆಯನ್ನು ಈ ಮಸೂದೆಯಲ್ಲಿ ತರುವುದಕ್ಕೆ ಹೊರಟಿದ್ದೇವೆ, ಇವೆಲ್ಲವೂ ಕೂಡ ಮುಂದೆ ಅನುಕೂಲವಾಗುತ್ತದೆ ಎನ್ನತಕ್ಕಂಥ ಒಂದು ಆಶಾಭಾವನೆಯಿಂದ ಈ ಒಂದು ಮಸೂದೆಯನ್ನು ಇಲ್ಲಿ ತಂದಿದ್ದೇನೆ. ಈ ಒಂದು ವಿಷಯದ ಬಗ್ಗೆ ಮಾತನಾಡಲು ಮಾನ್ಯ ಸದಸ್ಯರಿಗೆ ಹೆಚ್ಚಿನ ಅವಕಾಶವನ್ನು ಕೊಟ್ಟು ತಮ್ಮ ಅಪೇಕ್ಷೆಯಂತೆ ವಿಧೇಯಕವನ್ನು ಪರಿಷ್ಕರಿಸಲೋಚನೆಗಾಗಿ ಇಡುತ್ತೇನೆ.

ಛೇರ್ಮನ್ :— ಇವತ್ತು ನಾಲ್ಕು ವಿಚಾರಗಳು ಸಂಪೂರ್ಣವಾಗಿ ಆಗಬೇಕೆಂದು ನಿಗದಿ ಮಾಡಲಾಗಿದೆ. ಆದ್ದರಿಂದ ಮಾನ್ಯ ಸದಸ್ಯರು ತಮ್ಮಷ್ಟಿಗೆ ತಾವೆ ಸಮಯದ ಬಗ್ಗೆ ಗಮನಹರಿಸಿಕೊಂಡು ಮಾತನಾಡಿದರೆ ತುಂಬಾ ಸಂತೋಷ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು) :— ಸನ್ಮಾನ್ಯ ಛೇರ್ಮನ್‌ರವರೆ, ಮೊನ್ನೆ ದಿವಸ ನಡೆದಂತ ಬಿ.ಎ.ಸಿ. ಸಭೆಯಲ್ಲಿ ತೀರ್ಮಾನವಾಗಿರುವ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಏನೆಂದರೆ, ಈಗಾಗಲೇ ಸುಗ್ರೀವಾಜ್ಞೆ ಮೂಲಕ ತಂದಿರತಕ್ಕಂಥ ಬಿಲ್‌ಗೆ ಇಲ್ಲಿ ಪಾಸ್ ಮಾಡಿಕೊಡಬೇಕೆಂದು ತೀರ್ಮಾನವಾಗಿತ್ತು. ಹಾಗೆಯೇ ಈಗ ತಂದಿರತಕ್ಕಂಥ ಯೂನಿವರ್ಸಿಟಿ ಬಿಲ್ ಮತ್ತು ಇನ್ನು ನಾಲ್ಕೈದು ಬಿಲ್‌ಗಳನ್ನು ಈ ಎರಡು ದಿವಸಗಳಲ್ಲಿ ಆಗಬೇಕೆಂದು ಬಿ.ಎ.ಸಿ. ಸಭೆಯಲ್ಲಿ ಚರ್ಚೆಯಾಗಿತ್ತು. ಇದಕ್ಕೆ ನಾವು ಸಹ ಒಪ್ಪಿಕೊಂಡಿದ್ದೇವು. ಈಗ ಎರಡು-ಮೂರು ಬಿಲ್‌ಗಳು ಬಂದಿದೆ. ಆದ್ದರಿಂದ ಇದಕ್ಕೆ ವೇಳೆಯನ್ನು ನೋಡಿಕೊಂಡು ಚರ್ಚೆ ಮಾಡೋಣ. ಸರ್ಕಾರ ತಂದಿರತಕ್ಕಂಥ ಎಲ್ಲಾ ಬಿಲ್‌ಗಳನ್ನು ಪಾಸ್ ಮಾಡಿಕೊಂಡುಬಿಡುವೆಂದು ಬಿ.ಎ.ಸಿ. ಸಭೆಯಲ್ಲಿ ನಾವು ಹೇಳಿಲ್ಲ. ಈಗ ತಂದಿರತಕ್ಕಂಥ ಯೂನಿವರ್ಸಿಟಿ ಬಿಲ್ ಬಗ್ಗೆ ಸಾಕಷ್ಟು ಸದಸ್ಯರು ಮಾತನಾಡಬೇಕಾಗಿದೆ. ನಾನು ಪ್ರಾರಂಭ ಮಾಡಿದರು ಕೂಡ ಇದರ ಬಗ್ಗೆ ನಮ್ಮ ಶಾಸಕ ಮಿತ್ರರು ಬಹಳಷ್ಟು ಜನ ಮಾತನಾಡುವವರಿದ್ದಾರೆ. ನಾನು ಕಡಿಮೆ ಅವಧಿಯನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಮಾನ್ಯ ನಗರಾಭಿವೃದ್ಧಿ ಸಚಿವರು) :— ಮಾನ್ಯ ಸುರೇಶ್ ಕುಮಾರ್‌ರವರು ಮಾತನಾಡುವವರಿದ್ದಾರೆ. ತಮ್ಮ ಪಕ್ಷದಿಂದ 4-5 ಜನ ಸೀಮಿತವಾಗಿ ಮಾತನಾಡಬೇಕು. ಇದು ಬಹಳ ಆಸಕ್ತಿ ಇರುವ ನಿಮ್ಮ ವಿಷಯವಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಅಧ್ಯಕ್ಷರೆ, ಮಾನ್ಯ ಹಾಗೋಡು ತಿಮ್ಮಪ್ಪನವರೆ, ಇನ್ನೊಂದು ಬಿಲ್ ತಂದಿದ್ದರೆ ಚೆನ್ನಾಗಿರುತ್ತಿತ್ತು. Prevention of cruelty to MLAs. ಒಟ್ಟಾಗಿ ಕೊನೆಯಲ್ಲಿ ಇವೆಲ್ಲಾ ಬಿಲ್‌ಗಳನ್ನು ತಂದು ಮಾತನಾಡಬೇಕೆಂದರೆ ಹೇಗೆ? 10ನೇ ತಾರೀಖು ಅಧಿವೇಶನ ಮುಕ್ತಾಯವಾಗುತ್ತದೆಂದು ತಾವು ಹೇಳಿದಿರಿ. ನಂತರ 17ನೇ ತಾರೀಖು ಎಂದು ಹೇಳಿದಿರಿ, ಈಗ 24ನೇ ತಾರೀಖು ಇದೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ತಂದಿರುವ ಬಿಲ್ ನೋಡಿದರೆ, ಮಾನ್ಯ ನಗರಾಭಿವೃದ್ಧಿ ಸಚಿವರು ಹೇಳುವುದನ್ನು ನೋಡಿದರೆ, ಮಾನ್ಯ ಕಂದಾಯ ಸಚಿವರು ಹೇಳುತ್ತಾರೆ, ಅಧಿವೇಶನ ಮುಗಿಯಬೇಕಾದರೆ ಕನಿಷ್ಠ ಇನ್ನೊಂದು ವಾರಬೇಕು. ಅದಕ್ಕೋಸ್ಕರ ಆ ಬಿಲ್‌ನ್ನು ತರುತ್ತೀರಾ?

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ವಿಧೇಯಕ-2000,

ಬಿಲ್‌ನ್ನು ಮಂಡನೆ ಮಾಡುತ್ತಿದ್ದಾರೆ. ನಮ್ಮ ಉನ್ನತ ಶಿಕ್ಷಣ ಸಚಿವರು, ಒಳ್ಳೆಯವರು, ಸಜ್ಜನರು ಹಾಗೂ ಸುಸಂಸ್ಕೃತರು ಇದ್ದಾರೆ. ಆದರೆ ಅವರ ಕಡೆಯಿಂದ ಇಂತಹ ಬಿಲ್ ಏಕೆ ಬಂದಿದೆಯೋ ನನಗೆ ಗೊತ್ತಾಗುತ್ತಿಲ್ಲ, ಅದರಲ್ಲಿ ಕೆಲವು ಒಳ್ಳೆಯ ಅಂಶಗಳು ಇವೆ, ಆದರೆ ಅಲ್ಲಿ ಕೆಟ್ಟ ಅಂಶಗಳು ಬಹಳ ಇವೆ. ಇಂತಹ ಬಿಲ್ ತಮ್ಮ ಕಡೆಯಿಂದ ಬರುತ್ತದೆಂದರೆ ನನಗೆ ಇವತ್ತು ಸ್ವಲ್ಪ ವಿಷಾದವಾಗುತ್ತದೆ. ಇದನ್ನು ತರಾತುರಿಯಿಂದ ತರುವುದಕ್ಕೆ ಏನು ಅವಸರವಿದೆಯೆಂದು ನನ್ನ ಮೂಲ ಪ್ರಶ್ನೆಯಾಗಿದೆ. ಶಿಕ್ಷಣ ತಜ್ಞರಿಂದ ಸೆಮಿನಾರ್ ಮಾಡಿ, ಇದರ ಬಗ್ಗೆ ಡಿಸ್‌ಕಸ್ ಮಾಡಿ, ಸುಧಾರಣೆ ಮಾಡೋಣ, ಇವತ್ತು ವಿಶ್ವವಿದ್ಯಾನಿಲಯಗಳಲ್ಲಿ ಏನು ನಡೆಯುತ್ತಿದೆ ಅದರ ಬಗ್ಗೆ ಹೆಚ್ಚು ಚಿಂತನೆಯಾಗಬೇಕಾಗಿದೆ. ಸೆನೆಟ್ ಸದಸ್ಯರು ಏನು ಮಾಡುತ್ತಿದ್ದಾರೆ, ಅವರ ಕಾರ್ಯಚಟುವಟಿಕೆಗಳು ಏನು ಅಲ್ಲಿರುವ ವ್ಯವಸ್ಥೆಯ ಬಗ್ಗೆ ಚಿಂತನೆಯಾಗಲಿ. ನನಗೆ ತಿಳಿದಿರುವ ಹಾಗೆ ಇದನ್ನು ಮೊನ್ನೆ ನಡೆದ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನವನ್ನು ತೆಗೆದುಕೊಂಡು ಇದೇ ಪಾರದಲ್ಲಿ ಇದನ್ನು ಮಂಡನೆ ಮಾಡಿ ಮಂಜೂರು ಮಾಡಿಸಿ ಕೊಂಡು ಹೋಗಬೇಕೆನ್ನುವ ಒಂದು ತರಾತುರಿ ಏನಿದೆ ಎನ್ನುವುದರ ಬಗ್ಗೆ ನನಗೆ ಸ್ವಲ್ಪ ಸಂಶಯ ಬರುತ್ತದೆ. ಇದಕ್ಕಿಂತ ಪ್ರಮುಖವಾಗಿ ಚಿಂತನೆ ಮಾಡಬೇಕಾದ ಸಾಕಷ್ಟು ಬಿಲ್‌ಗಳು ಇನ್ನು ಇವೆ. ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಿದಂತೆ, ಕರ್ನಾಟಕ ರೆಂಟ್ ಕಂಟ್ರೋಲ್ ಆಕ್ಟ್ ಅಮೆಂಡ್‌ಮೆಂಟ್ ಬಿಲ್ ಇದು ಕಳೆದ ಅಧಿವೇಶನದಿಂದ ಬರುತ್ತದೆಂದು ನಾವು ಕೂಡ ನೋಡುತ್ತಿದ್ದೇವೆ, ಅದರಲ್ಲಿ ಕೆಲವೊಂದು ಬದಲಾವಣೆಯನ್ನು ತರಬೇಕಾಗಿದೆ, ಅದು ಲಕ್ಷಾಂತರ ಜನರಿಗೆ ಪರಿಣಾಮಕಾರಿಯಾಗಿರುವಂಥದ್ದಾಗಿದೆ. ಅದನ್ನು ತರಲಿಲ್ಲ, ಏಕೆಂದರೆ ಅದರಲ್ಲಿ ಕೆಲವೊಂದು ಕಾನೂನಿನ ತೊಂದರೆಗಳಿವೆ. ರೆಂಟ್ ಕಂಟ್ರೋಲ್ ಆಕ್ಟ್‌ಗೆ ಸಮಯ ಮುಗಿಯುತ್ತಾ ಬಂದಿದೆ, ಅವರಲ್ಲಿ ತೊಂದರೆಗಳು ಇರುವುದರಿಂದ, ಇವರು ಅದನ್ನು ತರಲಿಲ್ಲ. ಪಬ್ಲಿಕ್ ಟ್ರಸ್ಟ್ ಆಕ್ಟ್ ಇದೆ, ಕೆಲವೊಂದು ಕಡೆ ಬೇರೆ ಬೇರೆ ಆಕ್ಟ್‌ಗಳು ಆಕ್ಟ್ ಆಗುತ್ತಿವೆ, ನಮ್ಮ ರಾಜ್ಯದಲ್ಲಿ ದೇವಸ್ಥಾನಗಳಿಗೆ ಹಾಗೂ ಪ್ರಾರ್ಥನಾ ಮಂದಿರಗಳಿಗೆ ಅನ್ವಯಿಸುವಂಥ ಇವತ್ತಿನವರೆಗೆ ಒಂದೇ ಒಂದು ವಿಧೇಯಕ ಇರುವುದಿಲ್ಲ. ಸುಪ್ರೀಂ ಕೋರ್ಟಿನಲ್ಲಿ, ಕಳೆದ 5-6 ವರ್ಷಗಳಿಂದ ಒಂದು ಕೇಸ್‌ನಲ್ಲಿ, ಅಬ್ಸರ್ವೇಷನ್ ಮಾಡಿದ್ದಾರೆ. ಕರ್ನಾಟಕ ಸರಕಾರಕ್ಕೆ ನಿರ್ದೇಶನವನ್ನು ಕೊಟ್ಟಿದ್ದಾರೆ, ಇವೆಲ್ಲವನ್ನೂ ಕೂಡಿಸಿ ಒಂದು ವಿಧೇಯಕವನ್ನು ಮಾಡಲು ಹೇಳಿದರೂ ಕೂಡ ನಮ್ಮ ರಾಜ್ಯದಲ್ಲಿ ಇವತ್ತಿನವರೆಗೂ ಒಂದು ವಿಧೇಯದ ಪಾಲನೆಯಾಗಿರುವುದಿಲ್ಲ. ಆದರ ಬಗ್ಗೆ ಕೂಡ ಸಾಕಷ್ಟು ಚರ್ಚೆ ನಡೆದಿದೆ. ಆದರೆ ಇವರು ಆ ವಿಧೇಯಕವನ್ನು ತರಲಿಲ್ಲ. ಇವತ್ತು ಕಾಂಟ್ರೋವರ್ಸಿ ಇರುವ ಹೆಚ್ಚು ಚರ್ಚೆ ಮಾಡಬೇಕಾಗಿರುವ ಇಂತಹ ಒಂದು ಬಿಲ್ ತರುವ ಅವಶ್ಯಕತೆ ಏನಿತ್ತು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮುಖ್ಯವಾಗಿ ಇಲ್ಲಿ ಎರಡು ಮೂರು ಪಾಯಿಂಟ್‌ಗಳ ಬಗ್ಗೆ ನಾನು ಪ್ರಶ್ನೆ ಮಾಡುತ್ತೇನೆ. ಉಪ ಕುಲಪತಿಗಳನ್ನು ನೇಮಕ

ಮಾಡುವ ಅಧಿಕಾರ ರಾಜ್ಯಪಾಲರಿಗೆ ಇತ್ತು, ನೀವು ಹೇಳಿದ್ದು ಏನು, ರಾಜ್ಯಪಾಲರಿಗೆ ಇರುವ ಅಧಿಕಾರವನ್ನು ತೆಗೆದುಹಾಕಿರುವುದಿಲ್ಲ. ನೀವು ಇವತ್ತು ಮಾಡಿರುವ ತಿದ್ದುಪಡಿಯನ್ನು ನೋಡಿದರೆ ಅವರಿಗೆ ಎಲ್ಲಿ ಅಧಿಕಾರವಿದೆ? ನೀವು ಹೇಳಿದ್ದನ್ನು ಅವರು ಮಾಡಬೇಕು, ಅದಕ್ಕಾಗಿ ಅವರು ರಬ್ಬರ್ ಸ್ಟಾಂಪ್ ಇದ್ದ ಹಾಗೆ. ಅವರಿಗೆ ಆ ಅಧಿಕಾರವನ್ನು ಕೊಟ್ಟಿದ್ದೀರಿ. ಸೆಕ್ಷನ್ 14ರಲ್ಲಿ ಇದ್ದಂತೆ, ರಾಜ್ಯ ಸರ್ಕಾರ ಕುಲಪತಿಯಿಂದ ರಾಜ್ಯ ಸರ್ಕಾರದಿಂದ ವಿಶ್ವವಿದ್ಯಾನಿಲಯದ ಅನುದಾನದ ಆಯೋಗದಿಂದ ವಿದ್ಯಾ ವಿಷಯ ಪರಿಷತ್ತಿನಿಂದ ಮತ್ತು ಸಿಂಡಿಕೇಟ್‌ನಿಂದ ನಾಮ ನಿರ್ದೇಶಿತರಾದ ಒಬ್ಬೊಬ್ಬ ವ್ಯಕ್ತಿಯಿಂದ ಕೂಡಿದ 5 ಮಂದಿ ಸದಸ್ಯರನ್ನೊಳಗೊಂಡು ಒಂದು ಶೋಧನಾ ಸಮಿತಿಯನ್ನು ರಚಿಸತಕ್ಕದ್ದು. ರಾಜ್ಯ ಸರ್ಕಾರವು ಆ 5 ಜನರ ಪೈಕಿ ಅದರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡತಕ್ಕದ್ದು. ನೀವು ಯಾರನ್ನು ಹೇಳುತ್ತೀರಿ ಆ ಕಮಿಟಿಗೆ ಅವರೇ ಅಧ್ಯಕ್ಷರಾಗಬೇಕು. ರಾಜ್ಯ ಸರ್ಕಾರದ ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡ ಯಾವುದೇ ಕಾಲೇಜಿನ ಆಥವಾ ಸಂಸ್ಥೆಯ ವ್ಯವಹಾರಗಳೊಂದಿಗೆ ಸಂಬಂಧವಿರುವ ಯಾವ ವ್ಯಕ್ತಿಯನ್ನು ಶೋಧನಾ ಸಮಿತಿಯ ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡತಕ್ಕದ್ದಲ್ಲ. ಶೋಧನಾ ಸಮಿತಿಯು ಮೂರು ಜನರ ಒಂದು ಪಟ್ಟಿಯನ್ನು ಅಕರಾಧಿ ಕ್ರಮದಲ್ಲಿ ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಅವರ ಪೈಕಿ ಒಬ್ಬನನ್ನು ರಾಜ್ಯ ಸರ್ಕಾರವು ಉಪಕುಲಪತಿಯನ್ನಾಗಿ ನೇಮಕ ಮಾಡಲು ಕುಲಪತಿಗಳಿಗೆ ಶಿಫಾರಸ್ಸು ಮಾಡತಕ್ಕದ್ದು ಇಲ್ಲಿಯವರೆಗೆ ಇತ್ತು. ಆ ಕಮಿಟಿಯವರು ಮೂರು ಜನರ ಹೆಸರನ್ನು ಕೊಡುತ್ತಿದ್ದರು. ಆದರಲ್ಲಿ ಒಬ್ಬರನ್ನು ಮಾಡುವ ಅಧಿಕಾರ ರಾಜ್ಯಪಾಲರಿಗೆ ಇತ್ತು. ಶೋಧನಾ ಸಮಿತಿಯು ಮೂರು ಜನ ಸದಸ್ಯರ ಪಟ್ಟಿಯನ್ನು ಅಕರಾಧಿ ಕಮಿಟಿಯಲ್ಲಿ ಸಲ್ಲಿಸತಕ್ಕದ್ದು, ಅವರ ಪೈಕಿ ಒಬ್ಬನನ್ನು ರಾಜ್ಯ ಸರ್ಕಾರವು ಉಪ ಕುಲಪತಿಯನ್ನಾಗಿ ನೇಮಕ ಮಾಡಲು ಕುಲಪತಿಗೆ ಶಿಫಾರಸ್ಸು ಮಾಡತಕ್ಕದ್ದು, ಅಂತಹ ವ್ಯಕ್ತಿಯನ್ನು ಕುಲಪತಿಯವರು ಉಪಕುಲಪತಿಯನ್ನಾಗಿ ನೇಮಕ ಮಾಡತಕ್ಕದ್ದು, ಇದಕ್ಕೆ ಎಲ್ಲಿದೆ ಅಧಿಕಾರ? ತಾವು ತಿಳಿದವರು ಜ್ಞಾನವಂತರಾದವರು ಇದನ್ನು ಇಂಟರ್‌ಪ್ರಿಟೇಷನ್ ಮಾಡುವುದನ್ನು ನೋಡಿದರೆ ನನಗೆ ಬಹಳ ವಿಚಿತ್ರವೆನಿಸುತ್ತದೆ. ರಾಜ್ಯಪಾಲರಿಗೆ ಇವತ್ತು ಇರುವ ಅಧಿಕಾರವನ್ನು ನೀವು ಏಕೆ ಕಿತ್ತುಕೊಂಡಿರುತ್ತೀರಿ? ಇದರ ಹಿನ್ನಲೆ ಏನಿದೆ? ಎನ್ನುವ ಪ್ರಶ್ನೆ ಬರುತ್ತದೆ. ನಿಮಗೆ ನವನೀತ್‌ರಾವ್ ಕಮಿಟಿಯವರು ಇದನ್ನೇ ಹೇಳಿದ್ದಾರೆಯೇ? ಅಲ್ಲಿ ಏನು ಸಮಸ್ಯೆ ಕಿಟ್ಟಿರುತ್ತದೆ, ಯಾರೋ ಒಬ್ಬರು ಸೆನೆಟ್ ಸದಸ್ಯರು ತಪ್ಪುಗಳನ್ನು ಮಾಡಿರಬಹುದು. ಅಧಿಕಾರ ವಿಕೇಂದ್ರೀಕರಣ ಇವತ್ತು ಮಾಡುತ್ತಿದೇವೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇವತ್ತು ಎಲ್ಲದಕ್ಕೂ ನಾವು ಆಯ್ಕೆ ಮಾಡಿ ಸದಸ್ಯರನ್ನು ನೇಮಕ ಮಾಡುತ್ತಿದ್ದೇವೆ. ಸೆನೆಟ್‌ಗೆ ಎಷ್ಟೋ ಜನರು ಆಯ್ಕೆಯಾಗುತ್ತಿದ್ದರು, ಅವರು ಎಷ್ಟೋ ಕೆಲಸಗಳನ್ನು ಮಾಡುತ್ತಿದ್ದರು, ತಾವು ಇವತ್ತು ಅದನ್ನು ರದ್ದು ಮಾಡುತ್ತಿದ್ದೀರಿ. ನಿಮಗೆ ಯಾವ ಕೆಲವೊಂದು ಪಾಯಿಂಟ್ ಉಪಯೋಗ ಇವೆ ಅವುಗಳನ್ನು ಮಾತ್ರ ನೀವು

ತೆಗೆದುಕೊಂಡಿರುತ್ತೀರಿ. ನಾವು ಆ ರಿಪೋರ್ಟ್ ಪ್ರಕಾರ ಮಾಡಿದ್ದರೆ ಇದೊಂದು ಒಳ್ಳೆಯ ಬಿಲ್ ಆಗಬಹುದಾಗಿತ್ತು; ಆದರೆ ಆದು ಆಗಲಿಲ್ಲ. ಸೆನೆಟ್ ರದ್ದು ಮಾಡುವಂಥಾದ್ದು, ಇವತ್ತು ನೀವು ಪ್ರಜಾತಂತ್ರ ವ್ಯವಸ್ಥೆಗೆ ಕೊಡಲಿ ಏಟನ್ನು ಹಾಕಿರುತ್ತೀರಿ. ನಾವು ಎಸ್‌ಸಿ/ಎಸ್‌ಟಿಯವರಿಗೆ ಹಿಂದುಳಿದವರಿಗೆ ನೇಮಕಾತಿ ಕೊಡುವಂಥದ್ದು ಸರಿಯಾಗಿಲ್ಲವೆಂದು ಹೇಳಿದಿರಿ, ಬೇಕಾದರೆ ನಾವು ಅದರ ಬಗ್ಗೆ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನುಳಿದವರಿಗೆ ಯಾವ ಜನಾಂಗದವರಿಗೆ ಅನ್ಯಾಯವಾಗಿದೆ ಅವರಿಗೆ ನಾವು ಯಾವ ರೀತಿಯಾದ ಉಪಯೋಗವನ್ನು ಮಾಡುತ್ತೀರಿ ನಾವು ಅದಕ್ಕೆ ಒಂದು ಅವಕಾಶವನ್ನು ಮಾಡಿಕೊಡಿ. ಸೆನೆಟ್ ರದ್ದು ಮಾಡಿ ನಾಮಕರಣ ಮಾಡುವ ಒಂದು ವ್ಯವಸ್ಥೆಯನ್ನು ನೀವು ತರುತ್ತಿದ್ದೀರಿ. ಸಹಕಾರ ಸಂಘಗಳಲ್ಲಿ ನಾಮಕರಣ, ಮಹಾಸಭೆಯಲ್ಲಿ ನಾಮಕರಣ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿಯಲ್ಲಿ ನಾಮಕರಣ ಎಲ್ಲಾ ಹಂತದಲ್ಲಿ ನಾಮಕರಣವನ್ನು ಮಾಡಿ, ನಮ್ಮ ಪಾಲುದಾರ ಪಕ್ಷದವರು ಯಾರಿದ್ದಾರೆ ಅವರನ್ನು ತುಂಬಿಕೊಳ್ಳುವಂಥ ವ್ಯವಸ್ಥೆ ಏನಿದೆ, ಯೂನಿವರ್ಸಿಟಿಗಳಲ್ಲಿ ಮಾತ್ರ ಉಳಿದಿದ್ದವು. ಇಲ್ಲಿಯವರೆಗೆ ವಿಶ್ವವಿದ್ಯಾನಿಲಯಗಳಲ್ಲಿ ರಾಜಕಾರಣ ಪ್ರವೇಶ ಮಾಡಿರಲಿಲ್ಲ. ಕೆಲವು ವ್ಯಕ್ತಿಗಳ ಹಿತಾಸಕ್ತಿ ಕೆಲವೊಂದು ಜಡೆ ಆಗಿರಬಹುದು, ಇಲ್ಲಿಯವರೆಗೆ ನೇರವಾಗಿ ರಾಜಕಾರಣ ಪ್ರವೇಶವಾಗಿರಲಿಲ್ಲ, ನಾಮಕರಣದಿಂದ ವಿಶ್ವವಿದ್ಯಾನಿಲಯಗಳಲ್ಲಿ ರಾಜಕಾರಣ ಇನ್ನು ಮುಂದೆ ಪ್ರವೇಶವಾಗುತ್ತದೆ. ಅಲ್ಲಿ ಸರ್ಕಾರೀಕರಣವಾಗುತ್ತದೆ. ನಂತರ ಇದು ಕಾಂಗ್ರೇಸೀಕರಣವಾಗುತ್ತದೆ. ಇದೆಲ್ಲವನ್ನು ಮಾಡುವುದಕ್ಕೆ ನೀವು ಇವತ್ತು ಈ ಬಿಲ್‌ನ್ನು ತರುತ್ತಿದ್ದೀರಿ. ಇದರಲ್ಲಿ ಬೋಗಸ್‌ನೆಸ್ ಇಲ್ಲ, ಮಾಲಾಪೈಡ್ ಇಂಟೆನ್‌ಶನ್ ಇವೆ. ನೀವು ಏನು ದೊಡ್ಡ ಸುಧಾರಣೆ,ಕ್ರಾಂತಿ ಮಾಡುತ್ತೇನೆಂದು ಹೊರಟ್ಟಿದ್ದೀರಲ್ಲಾ, ಅದರಲ್ಲಿ ಏನು ಇರುವುದಿಲ್ಲ. ಬೋರ್ಡ್‌ಗಳಿಗೆ ಏನು ನಾಮಕರಣ ಮಾಡುತ್ತೇವೆ, ಅಂಥ ದೃಷ್ಟಿಕೋನವನ್ನು ನೀವು ಇಲ್ಲಿ, ಇಟ್ಟುಕೊಂಡು ಮಸಾತನಾಡುತ್ತಿದ್ದೀರಿ. ಅದಕ್ಕಾಗಿ ಇದರಿಂದ ಯಾವುದೇ

6.20 ಪಿ.ಎಂ.

ಒಂದು ಭವಿಷ್ಯದಲ್ಲಿ ಒಂದು ಒಳ್ಳೆಯ ಪರಿಣಾಮ ಆಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾವು ಡಾಕ್ಟರೇಟ್ ಪ್ರಶಸ್ತಿ ಕೊಡುವ ಬಗ್ಗೆ ಹೇಳಿದ್ದೀರಿ, ಬಹುಶ: ಅಲ್ಲಿ ಇಲ್ಲಿಯವರಿಗೆ ಎಕ್ಸೆಪ್‌ಶನಲ್ (exceptional) ಒಂದೆರಡು ಡಾಕ್ಟರೇಟ್ ಪ್ರಶಸ್ತಿಗಳನ್ನು ಕೊಟ್ಟಿರಬಹುದು. ಆದರೆ ನಾವು ಬಹುಶ: ಆ ಪಟ್ಟಿಯನ್ನು ತೆಗೆದು ನೋಡಿದರೆ ಈ ಸರ್ಕಾರವಿರಲಿ, ಅಥವಾ ಯಾವುದೇ ಸರ್ಕಾರ ಅಧಿಕಾರದಲ್ಲಿರಲಿ ಇವತ್ತು ನಾವು ಕೆಲವೊಂದು ರಾಜ್ಯ ಪ್ರಶಸ್ತಿಗಳನ್ನು ಕೊಡುತ್ತೇವೆ. ಯಾವುದೋ ರಂಗದಲ್ಲಿ ಸೇವೆ ಸಲ್ಲಿಸಿರುವಂತಹ ಗಣ್ಯರಿಗೆ ರಾಜ್ಯ ಪ್ರಶಸ್ತಿಯನ್ನು ನಾವು ಕೊಡುತ್ತೇವೆ. ಅಲ್ಲಿ ಎಷ್ಟು ಮೆರಿಟ್ ಇದೆ, ಇವತ್ತಿನ ದಿವಸ ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪ್ರಶಸ್ತಿಯನ್ನು

ತೆಗೆದುಕೊಂಡು ನೋಡಿ ಅಲ್ಲಿ ಎಷ್ಟು ಮೆರಿಟ್ ಇದೆ, ಇಲ್ಲಿ ಎಷ್ಟು ಮೆರಿಟ್ ಇದೆ ಎಂದು ಗೊತ್ತಾಗುತ್ತದೆ. ಹಂಪಿಗೆಯಾಗಿ ಈ ವಿಶ್ವವಿದ್ಯಾನಿಲಯವನ್ನು ರಾಜ್ಯ ಸರ್ಕಾರದ ಅಧೀನಕ್ಕೆ ತೆಗೆದುಕೊಂಡು ಅಲ್ಲಿ ತಮ್ಮ ಹಿಂಬಾಲಕರು ಯಾರು ಇದ್ದಾರೆ, ಯಾರು ಇದನ್ನು ಅನುಷ್ಠಾನಗೊಳಿಸುವ ಮಾಡುತ್ತಾರೋ ಅಂತಹವರಿಗೆ ಅವಕಾಶವನ್ನು ಕೊಡುವಂತಹದನ್ನು ಮಾಡಿರುತ್ತಾರೆ. ಇದರಲ್ಲಿ ರಾಜಕೀಯ ತರುವುದನ್ನು ಇವತ್ತು ನೀವು ಮಾಡುತ್ತಿದ್ದೀರಿ, ಈ ಡಾಕ್ಟರೇಟ್ ಪ್ರಶ್ನೆ ಮೆರಿಟ್ ಮೇಲೆ ಆಗಿರುವ ಒಂದೆರಡನ್ನು ಬಿಟ್ಟರೆ ಬಹುಶಃ ನನಗನಿಸುತ್ತದೆ. ತಾವು ಬಹಳ ತಪ್ಪು ದಾರಿಗೆ ಹೋಗುತ್ತಿದ್ದೀರಿ, ಬಹುಶಃ ಸೆನೆಟ್‌ನ್ನು ರದ್ದು ಮಾಡುವಂಥಾದ್ದನ್ನು ಮಾನ್ಯ ಹೆಚ್‌ಡಿಕೆ ಪಾಟೀಲ್‌ರವರು ಈಗ ಸದನದಲ್ಲಿದ್ದಾರೆ, ಹಿಂದೆ ಇದೇ ಪ್ರಪೋಸಲ್ ಬಂದಾಗ ಸೆನೆಟ್ ರದ್ದಾಗುತ್ತದೆ, ಆ ಆಕ್ಟಿನ ಬಿಲ್ ಬರುತ್ತದೆ ಎಂದಾಗ, ಆಗ ತಾವು ವಿರೋಧಪಕ್ಷದ ನಾಯಕರಾಗಿದ್ದೀರಿ ಆಗ ತಾವು ಅದರ ಬಗ್ಗೆ ಪ್ರತಿಭಟನೆ ಮಾಡಿ ಅಪೋಸ್ ಮಾಡಿರುವುದು ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ನೋಡಿದ್ದೇನೆ. ಅದರ ಬಗ್ಗೆ ನಿಮಗೆ ಗೊತ್ತಿರಬಹುದು, ಇವತ್ತು ತಾವು ಆ ಕ್ಯಾಬಿನೆಟ್‌ನಲ್ಲಿ ಸಚಿವರಾಗಿದ್ದಿರಿ, ಇವತ್ತು ಆ ಸೆನೆಟ್‌ನ್ನು ರದ್ದು ಮಾಡುವುದಕ್ಕಾಗಿ ಈ ಬಿಲ್‌ನ್ನು ತೆಗೆದುಕೊಂಡು ಬಂದಿದ್ದಾರೆ. ಅದಕ್ಕೂ ತಾವು ಸಪೋರ್ಟ್‌ನ್ನು ಕೊಟ್ಟು ಬೆಂಬಲವನ್ನು ಕೊಡುತ್ತಿದ್ದೀರಿ. ತಾವು ಸೆನೆಟ್ ಸದಸ್ಯರಾಗಿದ್ದೀರಿ, ಸಾಕಷ್ಟು ವಿಶ್ವವಿದ್ಯಾನಿಲಯಗಳ ಬಗ್ಗೆ ತಮಗೆ ಅನುಭವವಿದೆ. ಯಾವ ರೀತಿಯಾಗಿ ಕೋ-ಆಪರೇಟೀವ್ ಬಿಲ್ ಮೊನ್ನೆ ಬಂತು ಆ ಬಗ್ಗೆ, ಅಲ್ಲಿ ನಾಮಿನೇಟ್ ಬಗ್ಗೆಯೂ ಸಹ ನಾವು ಅಪೋಸ್ ಮಾಡಿದ್ದೆವು ಅದೇ ರೀತಿಯಾಗಿ ಇವತ್ತು ಇಲ್ಲಿ ಸೆನೆಟ್ ರದ್ದು ಮಾಡುವಂತಹ ವ್ಯವಸ್ಥೆಗೆ ಏನು ಬಿಲ್ಲನ್ನು ತೆಗೆದುಕೊಂಡು ಬಂದಿದ್ದಾರೆ, ಅಂತಹ ಬಿಲ್ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಕೈಬೋದಿಸುತ್ತಾರೆಂದರೆ ಬಹಳ ನನಗೆ ಕಿಟ್ಟದು ಎನ್ನಿಸುತ್ತದೆ. ಅದು ನನಗೆ ಅರ್ಥವಾಗುತ್ತಿಲ್ಲ, ದಯವಿಟ್ಟು ಇದರ ಬಗ್ಗೆ ಹೆಚ್ಚಿನ ಚರ್ಚೆಯಾಗಬೇಕಾಗಿದೆ, ಇವೆರಡು ಪಾಯಿಂಟ್‌ಗಳನ್ನು ಬಿಟ್ಟರೆ ನಾನು ಮಾನ್ಯ ಸಚಿವರಲ್ಲಿ ಇವತ್ತು, ನಾನು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ ಬಿಲ್ಲಿನ ಬಗ್ಗೆ ತರಾತುರಿಯನ್ನು ಮಾಡುವುದು ಬೇಡ, ಸುಧಾರಣೆಯನ್ನು ಮಾಡುವುದರಲ್ಲಿ ನಾವು ಮಾಡೋಣ, ಈ ವ್ಯವಸ್ಥೆಯು ಫ್ಯೂರ್ತಿಯಾಗಿ ಕಿಟ್ಟುಹೋಗುತ್ತಿದೆ, ತಾವು ಹೇಳಿದ ಹಾಗೆ ಸೆನೆಟ್‌ನಲ್ಲಿ ಅಧಿಕಾರ, ಸಿಂಡಿಕೇಟ್‌ನಲ್ಲಿರುವಂತಹ ಅಧಿಕಾರ ಎಲ್ಲಾ ಹೆಚ್ಚು ಕಡಿಮೆ ಒಂದೇ ಸಬ್ಜೆಕ್ಟಿಗೆ ಬರುತ್ತದೆ. ಅದೇ ಸಬ್ಜೆಕ್ಟೇ ಬಂದು ಅದೇ ಡಿಸಿಷನ್‌ಗೆ ಬರುತ್ತದೆ, ವಿಧಾನಸಭೆಯಲ್ಲಿ ಏನು ಚರ್ಚೆಯಾಗುತ್ತದೆ, ವಿಧಾನಪರಿಷತ್ತಿನಲ್ಲಿ ಏನು ಚರ್ಚೆಯಾಗುತ್ತದೆ ಇದನ್ನು ತಾವು ನೋಡಿದ್ದೀರಾ? ಹಾಗಾದರೆ ನಿಮ್ಮ ಆಡಳಿತ ಯಂತ್ರದಲ್ಲಿ ಅಡಿಷನಲ್ ಸೆಕ್ರೆಟರಿ, ಮತ್ತೊಂದು ಅಡಿಷನಲ್ ಸೆಕ್ರೆಟರಿ, ಡೆಪ್ಯೂಟಿ ಸೆಕ್ರೆಟರಿ, ಅಡಿಷನಲ್ ಸೆಕ್ರೆಟರಿ ನಂ.1 ಮತ್ತು 2, ಡೆಪ್ಯೂಟಿ ಸೆಕ್ರೆಟರಿ ನಂ.1 ಮತ್ತು ನಂ.2 ಇದನ್ನು ನಾವು ಟಚ್ ಮಾಡುವುದಕ್ಕಾಗಲಿಲ್ಲ.

ಡಾ: ಜಿ ಪರಮೇಶ್ವರ್ (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು) :— ಆ ದೃಷ್ಟಿಯಿಂದಲೇ ಇವತ್ತು ಅನೇಕ ರಾಜ್ಯಗಳಲ್ಲಿ ಕೌನ್ಸಿಲ್‌ನ್ನು ತೆಗೆದುಬಿಟ್ಟಿದ್ದಾರೆ. ಮತ್ತು ನಮ್ಮಲ್ಲಿಯೂ ತೆಗೆಯಬೇಕೋ ಅಥವಾ ಬೇಡವೋ ಅದರ ಬಗ್ಗೆ ಚರ್ಚೆ ನಡೆಯುತ್ತಿದೆ. ಮೊಟ್ಟಮೊದಲನೆಯದಾಗಿ ನಮ್ಮ ಸರ್ಕಾರದಲ್ಲಿ ಅಡ್ಮಿನಿಸ್ಟ್ರೇವ್ ರಿಫಾರ್ಮ್ಸ್ ಕಮೀಷನ್‌ನ್ನು ಮಾಡಿದ್ದಾರೆ. ಇದರ ಉದ್ದೇಶವೇನೆಂದರೆ, ಹಾವು ಹೇಳಿದ ಹಾಗೆ ವಿಧಾನಸೌಧವನ್ನು ಹತ್ತಬೇಕಾದರೆ 13 ಸ್ಟೆಪ್‌ನ್ನು ಉಪಯೋಗಿಸಬೇಕು, ಅವೆಲ್ಲವನ್ನು ಕಡಿಮೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ :— ಬಹಳಷ್ಟು ಕಮೀಷನ್‌ಗಳು ಆಗಿವೆ, ರಿಪೋರ್ಟ್‌ಗಳು ಬಂದಿವೆ, ಅವು ಸರ್ಕಾರದ ಯಾವುದೋ ಮೂಲೆಯಲ್ಲಿ ಇವೆ. ತಾವು ನವನೀತರಾವ್‌ರವರ ರಿಪೋರ್ಟಿನ ಬಗ್ಗೆ ಹೇಳಿದ್ದೀರಿ, ಅಲ್ಲಿರುವ 2-3 ಪಾಯಿಂಟ್‌ಗಳ ಬಗ್ಗೆ ಅವರು ಪ್ರಮುಖವಾಗಿ ಶಿಫಾರಸ್ಸು ಮಾಡಿರುವುದನ್ನು ನಾನು ಹೇಳುತ್ತೇನೆ. Navneeth Rao Committee says that instead of Senate and Academic Council only one body namely Academic Senate may be introduced which will have combined functions of Senate and Academic Council. The Syndicate of the University will be abolished and re-constituted and renamed as Executive Council of the University. ಎಂದು ಹೇಳಿದ್ದಾರೆ. ಅವರು ಆಗಬಾರದು ಎಂದು ಹೇಳಲಿಲ್ಲ. The V.C. shall be appointed by the Chancellor. ಎಂದು ಕಮಿಟಿಯವರು ಹೇಳಿರುವುದು. ಅದರ ಬದಲಾಗಿ ನೀವೇನು ಮಾಡುತ್ತಿದ್ದೀರಿ ಎಂದರೆ, The V.C. shall be appointed by the Chancellor, and will be chosed from three persons recommended by the Committee. No member of the Committee shall be connected to the State Government, University or any college or institution affiliated to the University. The posts of Pro-Chancellors in the Karnataka State Universities may be scrapped. ಇವು ಪ್ರಮುಖವಾದಂತಹದ್ದು. ಆದರೆ, ಇವತ್ತು, ನೀವು ಬಿಲ್ಲಿನಲ್ಲಿ ಡಿವಿಯೇಟ್ ಮಾಡಿ ನೀವು ಏನು ಮಾಡುತ್ತಿದ್ದೀರೆಂದರೆ, The Bill of 2000 has deviated from the recommendations. The bill proposes abolition of Senate. Its powers are now conferred on Syndicate. More powers to the Government are given in the administrative functions of the Universities. The Government selects the Vice-Chancellor. The powers of the Chancellor to nominate the Academic Council members is abrogated and vested with the Government. Elections to any statutory bodies are dispensed with. ಇವು ಯಾವುದೇ ಕಮಿಟಿಯಲ್ಲಿ ರೆಕಮೆಂಡ್ ಆಗಿಲ್ಲ. ಇವುಗಳೆಲ್ಲಾ ಹೊಸದಾಗಿ ಬಂದಿವೆ. ರಾಜ್ಯ ಸರ್ಕಾರದ ಕೈಯೊಳಗೆ ಇಡೀ ವಿಶ್ವವಿದ್ಯಾನಿಲಯವನ್ನು ನಿಮ್ಮ ಕಂಟ್ರೋಲ್‌ನೊಳಗೆ ಅಂದರೆ ನಿಮ್ಮ ಕಪಿಮುಷ್ಟಿಯೊಳಗೆ ಹಿಡಿದುಕೊಳ್ಳುವ ಸಲುವಾಗಿ ಇದನ್ನು ಮಾಡುತ್ತಿದ್ದೀರಿ. ಇದಕ್ಕೆ ಬೇರೆ ಏನು ಅರ್ಥವಿಲ್ಲ, ಎನೋ ದೊಡ್ಡ ಸುಧಾರಣೆ,

ಕ್ರಾಂತಿಯನ್ನು ಮಾಡುವುದಕ್ಕೆ ತಾವು ಹೊರಟಿಲ್ಲ, ಈ ವಿಶ್ವವಿದ್ಯಾನಿಲಯಗಳನ್ನು ನಿಮ್ಮ ಕಂಟ್ರೋಲ್‌ನಲ್ಲಿಟ್ಟುಕೊಳ್ಳುವುದಕ್ಕೆ ಕಾಂಗ್ರೇಸೀಕರಣ, ರಾಜಕೀಯಕರಣವನ್ನು ಸರ್ಕಾರೀಕರಣವನ್ನು ಮಾಡುವುದಕ್ಕೆ ಇವತ್ತು ತಾವು ಹೊರಟಿದ್ದೀರಿ. ಇದರ ದುಷ್ಪರಿಣಾಮ ಮುಂದೆ ಬಹಳಷ್ಟಾಗುತ್ತದೆ, ಇವತ್ತು ಬೇರೆ ಬೇರೆ ವೇದಿಕೆಗಳು ಇದೆ. ಇವತ್ತು ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಕೆಲಸ ಮಾಡುವಂತಹ ಸಂಸ್ಥೆಗಳು ಇದೆ. ಅದೇ ರೀತಿಯಾಗಿ ಇವತ್ತು ನಾವು ಆಟಾನಮಸ್ ಬಾಡಿ ಎಂದು ಮಾಡಿದ್ದೇವೆ, ವಿಶ್ವವಿದ್ಯಾನಿಲಯಗಳೆಲ್ಲಾ ಆಟಾನಮಸ್ ಬಾಡಿಯಾಗಿದೆ. ಇದು ಆ ಬಿಲ್ಲಿನಿಂದ ಪೂರ್ತಿಯಾಗಿ ನಶಿಸಿಹೋಗುತ್ತದೆ. ಆಟಾನಾಮಸ್‌ನ್ನು ವ್ಯವಸ್ಥೆಯನ್ನು ರದ್ದು ಮಾಡಿ, ಆ ಒಂದು ಯೋಚನೆಯನ್ನು ಕೈಗೆ ತೆಗೆದುಕೊಳ್ಳುವಂಥದ್ದನ್ನು ಏನು ಇತ್ತೆಂದು ನಾನು ಪ್ರಶ್ನೆ ಮಾಡುತ್ತಿದ್ದೇನೆ. ಇದರ ಬಗ್ಗೆ ನಮ್ಮ ಶಾಸಕ ಮಿತ್ರರುಗಳು ಮಾತನಾಡುವವರು ಇದ್ದಾರೆ, ನಾನು ತಮ್ಮಲ್ಲಿ ವಿನಂತಿಮಾಡಿಕೊಳ್ಳುವುದೇನೆಂದರೆ, ದಯವಿಟ್ಟು ಇದರ ಬಗ್ಗೆ ಚರ್ಚೆಗೆ ಅವಕಾಶವನ್ನು ಮಾಡಿಕೊಡಿ, ಇದು ಇಡೀ ರಾಜ್ಯದಲ್ಲಿ ಇದರ ಬಗ್ಗೆ ಚರ್ಚೆಯಾಗಲಿ, ಈಗಾಗಲೇ ಈ ಬಿಲ್ಲಿನ ಬಗ್ಗೆ ಎರಡು ದಿವಸಗಳಿಂದ ಸಾಕಷ್ಟು ಚರ್ಚೆಗಳಾಗಿದೆ, ಇದರ ಬಗ್ಗೆ ಇನ್ನಷ್ಟು ಚರ್ಚೆಯನ್ನು ಮಾಡೋಣ. ಈ ಬಿಲ್ಲಿನ ಬಗ್ಗೆ ಕೆಲವೊಂದು ಅಮೆಂಡ್‌ಮೆಂಟ್ಸ್‌ಗಳನ್ನು ತಂದು, ಕೆಲವು ಸಲಹೆ ಮತ್ತು ಸೂಚನೆಗಳನ್ನು ತೆಗೆದುಕೊಂಡು ಏನಾದರೂ ಬದಲಾವಣೆಗಳನ್ನು ತೆಗೆದುಕೊಂಡು ಬರೋಣ. ನಮಗೂ ಸಹ ಈ ಬಿಲ್ಲಿನ ಬಗ್ಗೆ ಕಾಳಜಿ ಇದೆ, ಈ ವಿಶ್ವವಿದ್ಯಾನಿಲಯದ ಆಡಳಿತದ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ಮಾಡೋಣ, ಒಂದು ಒಳ್ಳೆಯ ಶಿಕ್ಷಣವು, ಮಾತಾವರಣವು ವಿದ್ಯಾರ್ಥಿಗಳಲ್ಲಿ ಮೂಡಲಿ ಎನ್ನುವಂತಹ ಕಳಕಳಿಯೂ ನಮಗೂ ಕೂಡ ಇದೆ. ಅದರ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ತೆಗೆದುಕೊಂಡು, ಇನ್ನು ಸ್ವಲ್ಪ ಹೆಚ್ಚಾಗಿ ಸೆಮಿನಾರ್‌ಗಳನ್ನು ಮಾಡಿ, ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ, ಇದು ಒಂದು ಶಕ್ತಿಯುವಾದ ಬಿಲ್ ಆಗುವುದಕ್ಕೆ ಸಾಧ್ಯವಾಗುತ್ತದೆ. ಆ ದಿಸೆಯಲ್ಲಿ ತಾವು ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟರೆ ಒಳ್ಳೆಯದಾಗುತ್ತದೆ ಇಲ್ಲದಿದ್ದರೆ ಈ ಒಂದು ಬಿಲ್ ಏನು ಇದೆ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿ ರೆಫರ್ ಮಾಡಿ ಕಳುಹಿಸಿಕೊಡಿ. ಇದರ ಬಗ್ಗೆ ಡಿಸಕಷನ್ ಆಗಲಿ, ಇದು ಅದಾಗ ಮಾತ್ರ ಒಳ್ಳೆಯ ರೂಪು ಸಿಗುವುದಕ್ಕೆ ಸಾಧ್ಯವಾಗುತ್ತದೆ, ಇದಕ್ಕೆ ತಾವು ಹೆಚ್ಚು ಒತ್ತಾಯವನ್ನು ಮಾಡದೆ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಮುಂದೆ ಇದರ ಬಗ್ಗೆ ಚರ್ಚೆಯಾಗಲಿ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ 2000 ಏನಿದೆ ಇದನ್ನು ಸದನದ ಮುಂದಿಟ್ಟಿದ್ದಾರೆ, ಇದರ ಬಗ್ಗೆ ಸಮಗ್ರವಾದ ಚಿಂತನೆ ನಡೆದಿದ್ದರೂ ಈಗ ಜಾರಿಯಲ್ಲಿರುವ 1976ರ

ಯೂನಿವರ್ಸಿಟಿ ಆಕ್ಟ್ ಏನಿದೆ ಅದು ಬಂದು 24-25 ವರ್ಷಗಳಾಗಿದೆ. ನಾನು ಹೊಸ ಆಕ್ಟ್ ತರಬಾರದೆಂದು ಹೇಳುವವನಲ್ಲ. 25 ವರ್ಷಗಳಲ್ಲಿ ಆಕ್ಟ್‌ನ ಅನುಭವದ ಆಧಾರದ ಮೇಲೆ ಯಾವ್ಯಾವ ರೀತಿಯಲ್ಲಿ ವಿಶ್ವವಿದ್ಯಾನಿಲಯಗಳು ನಡೆದುಕೊಂಡು ಬಂದಿವೆ ಅದರ ಅನುಭವದ ಆಧಾರದ ಮೇಲೆ ಬದಲಾವಣೆ ತರತಕ್ಕದ್ದು ಇದೆ. ಆ ದೃಷ್ಟಿಯಿಂದ 1992ರಲ್ಲಿ ಉನ್ನಾನಿಯ ವಿಶ್ವವಿದ್ಯಾನಿಲಯದ ಉಪಕುಲಪತಿಗಳಾದ ನವನೀತರಾವ್ ಅವರ ಅಧ್ಯಕ್ಷತೆಯಲ್ಲಿ ಅಂದಿನ ಚಾನ್ಸಲರ್ ಖುರ್ಷಿದ್ ಆಲಂ ಖಾನ್‌ರವರು ಒಂದು ಸಮಿತಿಯನ್ನು ನೇಮಕ ಮಾಡಿದ್ದರು. ಅದು 1993 ರಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ. ಅವರು ಯಾವರೀತಿ ವರದಿಯನ್ನು ಕೊಟ್ಟಿದ್ದಾರೆಂಬುದನ್ನು ಸೂಕ್ಷ್ಮವಾಗಿ ಮತ್ತು ಬ್ರಾಡ್ ಆಗಿ ಮಾನ್ಯ ಶಿಕ್ಷಣ ಮಂತ್ರಿಗಳು ಹೇಳಿದ್ದಾರೆ. ಆ ವರದಿಯಲ್ಲಿ ಸುಮಾರು 8-10 ಬಹಳ ಪ್ರಮುಖವಾದ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಕೆಲವು ಕಡೆ ಯಾವ್ಯಾವ ರೀತಿ ಶಿಫಾರಸ್ಸು ಮಾಡಿದ್ದಾರೆಂದು ಹೇಳಿದ್ದಾರೆ. ಆ ವರದಿಯನ್ನು ಕೊಟ್ಟು ಇಲ್ಲಿಗೆ ಸುಮಾರು ಏಳು ವರ್ಷಗಳಾಗಿದೆ. ನಾನು 1996ರಲ್ಲಿ ಉನ್ನತ ಶಿಕ್ಷಣ ಖಾತೆಯ ಸಚಿವನಾಗಿದ್ದೆ. ಆ ವರದಿ ಬಂದು ಮೂರು ವರ್ಷಗಳಾಗಿತ್ತು. ಆಗ ನಾನೊಂದು ಪ್ರಯತ್ನ ನಡೆಸಿದೆ. ಈವೊಂದು ಚಿಂತನೆಯಾಗಬೇಕೆಂದು ಹೊಸ ಆಕ್ಟನ್ನು ತಯಾರು ಮಾಡಬೇಕೆಂದು ಹೇಳಿ ಶಿಕ್ಷಣ ತಜ್ಞರನ್ನು ಪ್ರಾಧ್ಯಾಪಕರನ್ನು, ಸಿಂಡಿಕೇಟ್ ಸದಸ್ಯರುಗಳನ್ನು ಕೆಲವು ಪ್ರಾಂಶುಪಾಲರುಗಳನ್ನು ಕರೆಸಿ ಚರ್ಚೆಮಾಡಿ ಒಂದು ಮಸೂದೆಯನ್ನು ತಯಾರು ಮಾಡಿದ್ದೆ. ಬಹುಶಃ ಅದರ ಸಹಾಯವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅದನ್ನು ತಮ್ಮ ಭಾಷಣದಲ್ಲಿ ಹೇಳಲಿಲ್ಲ, ಸಹಾಯವಾಗಿರಬಹುದೆಂದು ನನ್ನ ಭಾವನೆ. ಅದನ್ನು ನಾನು ಇಟ್ಟುಕೊಂಡಿದ್ದೇನೆ, ಸುಮಾರು ಮೂರು ವರ್ಷಗಳಿಂದ ನನ್ನ ಹತ್ತಿರ ಅದು ಇದೆ. ಕರ್ನಾಟಕ ಯೂನಿವರ್ಸಿಟಿ ಆಕ್ಟ್ 1997. ಅದನ್ನು ನೋಡಿದೆ, ಈಗಿನದನ್ನು ನೋಡಿದೆ. ಇದರಲ್ಲಿ ಕೆಲವು ಮೂಲಭೂತವಾದ ಬದಲಾವಣೆಗಳನ್ನು ತರುವುದಕ್ಕೆ ಹೊರಟಿದ್ದಾರೆ. ಅದನ್ನು ನಾವು ಯೋಚನೆ ಮಾಡಿರಲಿಲ್ಲ. ನಾನು ಇದನ್ನು ತರಬಾರದೆಂದು ಹೇಳುತ್ತಿಲ್ಲ. ನಾನು ಮೊದಲೇ ಹೇಳಿದ್ದೇನೆ, ಈ ಮಸೂದೆಯನ್ನು ತರತಕ್ಕದ್ದು ಅವಶ್ಯಕತೆಯಿದೆ. ಬದಲಾವಣೆಗಳು ಆಗಬೇಕು ಈ ತರಹ ಹೊಸ ಹೊಸ ಚಿಂತನೆಗಳು ನಡೆಯಬೇಕು. 25-26 ವರ್ಷಗಳಿಂದ ಇದ್ದಂತಹ ಆಕ್ಟ್ ಏನಿತ್ತು ಅದನ್ನು ಈಗ ಬದಲಾವಣೆ ಮಾಡಲಾಗಿದೆ. ನವನೀತರಾವ್‌ರವರ ಕಮಿಟಿ ಮೂಲಭೂತವಾದ ಶಿಫಾರಸ್ಸುಗಳನ್ನು ಏನು ಮಾಡಿದೆ ಅಂದರೆ, ಶೈಕ್ಷಣಿಕ ಗುಣಮಟ್ಟ ಹೆಚ್ಚಾಗಬೇಕು. How to improve the academic excellence? How to bring about discipline in the Univerisites? How to improve the standards of education, collegiate education, higher education? ಅದರ ಬಗ್ಗೆ ಹೆಚ್ಚು ಚಿಂತನೆಯನ್ನು ಅವರು ನಡೆಸಿದ್ದಾರೆ. ಅನೇಕ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಅದನ್ನೆಲ್ಲ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ.

ಸೆಲ್ ಫಾರಂ ಇದನ್ನೆಲ್ಲ ಮಾಡಿದ್ದಾರೆ. ಅವರ ಮೊದಲನೆಯ ಶಿಫಾರಸ್ಸು ಏನೆಂದರೆ ಸೆನೆಟ್ ಅದರ ಅವಶ್ಯಕತೆ ಇಲ್ಲ. ಒಂದು ವರ್ಷಕ್ಕೆ ಎರಡು ಸಾರಿ ಅಥವಾ ಮೂರು ಸಾರಿ ಸಭೆ ಸೇರುತ್ತಾರೆ, ಅದು ಜನರಲ್ ಬಾಡಿ ಇದ್ದಾಗ. ಸೆನೆಟ್‌ಗೆ ಕೇವಲ ಸ್ಯಾಚ್ಷನ್ ಮಾಡತಕ್ಕ ಅಧಿಕಾರ ಇದೆ. ಸರ್ಕಾರದ ಕಡೆಯಿಂದ ಅಪ್ರೂವಲ್ ತೆಗೆದುಕೊಂಡು ಕಾನೆವೊಕೇಷನ್ ಮಾಡತಕ್ಕದ್ದು. ಈ ತರಹ ಒಂದೆರಡು ಕೆಲಸಗಳನ್ನು ಬಿಟ್ಟರೆ ಅದಕ್ಕೆ ಹೆಚ್ಚಾಗಿ ಏನೂ ಕೆಲಸವಿಲ್ಲ. ಆದರೆ ಸೆನೆಟ್‌ಗೆ ಬಂದಂತಹ ವ್ಯಕ್ತಿಗಳು ಸಿಂಡಿಕೇಟ್‌ಗೆ ಆಯ್ಕೆಯಾಗುತ್ತಾರೆ. ಅಲ್ಲಿ ಅವರು ಎಲ್ಲಾ ಚಟುವಟಿಕೆಗಳನ್ನು ನಡೆಸುತ್ತಾರೆ. ಅದಕ್ಕೆ ಏನು ಶಿಫಾರಸ್ಸು ಮಾಡಿದ್ದರು ಅಂದರೆ ಅಕಾಡೆಮಿಕ್ ಕೌನ್ಸಿಲ್ ಮತ್ತು ಸೆನೆಟ್ ಎರಡೂ ಸೇರಿಸಿ ಒಟ್ಟಿಗೆ ಅಕಾಡೆಮಿಕ್ ಸೆನೆಟ್ ಎಂದು ಮಾಡಬೇಕೆನ್ನುವುದು. ಅದನ್ನು ನಾವು ಇಟ್ಟುಕೊಂಡಿದ್ದೇವೆ. ಸೆನೆಟ್‌ನ್ನು ಸಂಪೂರ್ಣವಾಗಿ ತೆಗೆದು ಅಕಾಡೆಮಿಕ್ ಕೌನ್ಸಿಲ್ ಒಂದನ್ನು ಮಾತ್ರ ಇವರು ಇಟ್ಟುಕೊಂಡಿದ್ದಾರೆ. ಇನ್ನೊಂದು ಪ್ರಮುಖವಾದ ತೀರ್ಮಾನವನ್ನು ಅವರು ಏನು ಮಾಡಿದ್ದರೂ ಅಂದರೆ ಇದಕ್ಕೆ ಯಾವುದೇ ಚುನಾವಣೆ ಇರಬಾರದೆಂದು ಒಂದು ತೀರ್ಮಾನ ಮಾಡಿದ್ದರು. ನಾವು ಚುನಾವಣೆ ಇರಬೇಕೆಂದು ಹೇಳುವವರು. ಈ ವ್ಯವಸ್ಥೆಯೊಳಗಡೆ ಬಹಳ ಕೆಟ್ಟು ಹೋಗುತ್ತಿದೆ ಅದ್ದರಿಂದ ಈ ವ್ಯವಸ್ಥೆ ತಪ್ಪೆಂದು ಹೇಳತಕ್ಕದ್ದು ಸರಿಯಲ್ಲ. ನೆಗಡಿ ಬಂದರೆ ಮೂಗನ್ನು ಕೊಯ್ದು ಹಾಕುವುದು ಸರಿಯಲ್ಲ. ಔಷಧಿ ಕೊಟ್ಟು ಯಾವರೀತಿ ವಾಸಿ ಮಾಡಬೇಕೆನ್ನುವ ಬಗ್ಗೆ ಯೋಚನೆ ಮಾಡಬೇಕು. ಹಾಗಾದರೆ ನಮ್ಮ ಅಸ್ಥೆಬಿಗೆ ಚುನಾವಣೆ ಏಕೆ ಬೇಕು ನಿಲ್ಲಿಸಬಹುದು. ಆದರೆ ಶೈಕ್ಷಣಿಕ ಸಂಸ್ಥೆಗಳಿಗೆ ಚುನಾವಣೆ ಸ್ವಾಯತ್ತತೆ, ಅವು ಇಂಡಿಪೆಂಡೆಂಟ್ಸ್ ಆಟಾನಮಸ್ ಬಾಡಿ, ಯೂನಿರ್ವಸಿಟಿಗಳನ್ನು ನಡೆಸಿಕೊಂಡು ಹೋಗಬೇಕಾದರೆ ಅಲ್ಲಿ ಒಂದು ಬಾಡಿ ಇರಬೇಕಾಗುತ್ತದೆ. ಅದಕ್ಕೆ ಸರ್ಕಾರ ಏನು ನಾಮಕರಣ ಮಾಡುತ್ತಿದೆ I think it infringes the independence of the Universities. ಅಕಾಡೆಮಿಕ್ ಆಟಾನಮಿ ಅದು ಹೋಗುತ್ತದೆ ಎನ್ನುವುದು ನನ್ನ ಭಾವನೆ. ನಾವೊಂದು ಚಿಂತನೆಯನ್ನು ಮಾಡಿದ್ದೇವೆ. ತಾವು ಅದರ ಬಗ್ಗೆ ಯೋಚನೆ ಮಾಡಬಹುದು. ನವನೀತರಾವ್ ಕಮಿಟಿ ರಿಪೋರ್ಟ್‌ನಲ್ಲಿರುವುದನ್ನು ತಾವು ಹೇಳಿದ್ದೀರಿ. ಅಕಾಡೆಮಿಕ್ ಮತ್ತು ಸೆನೆಟ್ ಎರಡನ್ನು ಇಟ್ಟು ಇತರೆ ಪ್ರಮುಖವಾದ ನಿರ್ಧಾರಗಳನ್ನು ಬಿಟ್ಟು ಬೇರೆಯವರನ್ನು ಮಾಡಿದ್ದಾರೆ. ನವನೀತರಾವ್ ಕಮಿಟಿ ರಿಪೋರ್ಟ್‌ನಲ್ಲಿ ಅಕಾಡೆಮಿ ಆಟಾನಮಿ ಎಂದು ಇತ್ತು. ಇಲ್ಲಿ, ತಂದಿರತಕ್ಕ ವಿಚಾರಗಳನ್ನು ನೋಡುವುದಾದರೆ ಒಂದು ಶಿಕ್ಷಣ ಪದ್ಧತಿಯಲ್ಲೂ ಸಹ ಸರ್ಕಾರದ ಹಸ್ತಕ್ಷೇಪ ಕೆಲವು ವಿಚಾರಗಳಲ್ಲಿ ಎದ್ದು ಕಾಣಿಸುತ್ತಿದೆ. ಅದ್ದರಿಂದ ನನ್ನ ಸಲಹೆ ಅಕಾಡೆಮಿಕ್ ಕೌನ್ಸಿಲ್ ಮತ್ತು ಸೆನೆಟ್ ಎರಡೂ ಸೇರಿಸಿ ಅಕಾಡೆಮಿಕ್ ಸೆನೆಟ್ ಎಂದು ಇಟ್ಟು ಅದಕ್ಕೆ ಚುನಾವಣೆಯನ್ನು ಯಾವರೀತಿ ಇಡಬೇಕೆನ್ನುವ ಬಗ್ಗೆ ವಿಚಾರ ಮಾಡಬೇಕು. ಚುನಾವಣೆಗೆ ಎಸ್‌ಎಸ್‌ಎಲ್‌ಸಿ ಫೇಲಾದವರು ನಿಲ್ಲತಕ್ಕದ್ದಲ್ಲ. ಯಾರಾದರೂ ಊರಿನಲ್ಲಿ ಪ್ರಾಥಮಿಕ ಶಾಲೆಯ ಉಪಾಧ್ಯಾಯರು ಇದ್ದರೆ ಅವರು ಚುನಾವಣೆಗೆ ನಿಲ್ಲತಕ್ಕದ್ದಲ್ಲ.

ಇದಕ್ಕೆ ಕ್ವಾಲಿಫಿಕೇಶನ್ ನಿಗದಿಮಾಡಿ, ಕಾಲೇಜುಗಳ ಪ್ರಾಂಶುಪಾಲರು, ಪ್ರೊಫೆಸರ್ಸ್ ಯಾರು ಶಿಕ್ಷಣ ತಜ್ಞರು ಇರುತ್ತಾರೆ ಅಂತಹವರು ಮಾತ್ರ ಚುನಾವಣೆಗೆ ನಿಲ್ಲಬೇಕು. ಅಂತಹ ಒಂದು ಬಾಡಿಯಾದರೆ ಅದಕ್ಕೆ ನಿಜವಾಗಿಯೂ ಒಂದು ಬೆಲೆ ಬರುತ್ತದೆ. ಅದಕ್ಕೆ ಉನ್ನತವಾದ ಬೆಲೆ ಬರುತ್ತದೆ. ಗುಣಮಟ್ಟದ ಚರ್ಚೆ ಅಲ್ಲಿ ಆಗುತ್ತದೆ. ಆಗ ಶಿಕ್ಷಣದ ಪ್ರಗತಿ ಜಾಸ್ತಿಯಾಗುತ್ತದೆಂದು ನನ್ನ ಅಭಿಪ್ರಾಯ. ಇದನ್ನು ತಾವು ಯೋಚನೆ ಮಾಡಿ. ನನಗೆ ಗೊತ್ತಿದೆ, ಯೂನಿವರ್ಸಿಟಿಗಳಲ್ಲಿ ಚುನಾವಣೆಯಾಗಿರತಕ್ಕದ್ದು ಬಹಳ ಕೆಟ್ಟುಹೋಗಿದೆ ನಮಗೆ ನಾಚಿಕೆಯಾಗುತ್ತದೆ. ಆ ದೃಷ್ಟಿಯನ್ನಿಟ್ಟುಕೊಂಡು ಚುನಾವಣೆ ಬೇಡವೆಂದು ತೆಗೆದಿದ್ದೀರಿ ಎಂದು ನಾನು ಭಾವಿಸಿಕೊಂಡಿದ್ದೇನೆ. ಆ ಉದ್ದೇಶ ತಪ್ಪೆಂದು ನಾನು ಹೇಳುವುದಿಲ್ಲ, ಆದರೆ ಸಂಪೂರ್ಣವಾಗಿ ಚುನಾವಣೆಯನ್ನು ತೆಗೆಯತಕ್ಕದ್ದು ಪ್ರಜಾಪ್ರಭುತ್ವದ ತತ್ವಕ್ಕೆ ಕೊಡಲಿ ಪೆಟ್ಟು. ಕ್ವಾಲಿಫಿಕೇಶನ್ ಫಿಕ್ಸ್‌ಮಾಡಿ, ಸ್ಟ್ಯಾಂಡರ್ಡ್ ಫಿಕ್ಸ್ ಮಾಡಿ, ಪ್ರೊಫೆಸರ್ಸ್, ಪ್ರಿನ್ಸಿಪಾಲ್ಸ್, ಡೀನ್ಸ್ ಇವರು ಚುನಾವಣೆಗೆ ನಿಲ್ಲಬೇಕೆಂದು ಮಾಡಿ. ಅಂತಹವರು ಬಂದರೆ ಉತ್ತಮ ಬಾಡಿ ಅಕಾಡೆಮಿಕ್ ಸೆನೆಟ್ ಆಗುತ್ತದೆ. ಇದು ನಮ್ಮ ಸಲಹೆ ತಾವು ಯೋಚನೆ ಮಾಡಬಹುದು. ಅಕಾಡೆಮಿಕ್ ಕೌನ್ಸಿಲ್‌ನಲ್ಲಿ ಇವುಗಳ ಬಗ್ಗೆ ಚರ್ಚೆಮಾಡಿ ಕೊನೆಗೆ ಸಿಂಡಿಕೇಟ್‌ಗೆ ಹೋದರೆ ಅದರ ಅನುಕೂಲವಾಗಬಹುದು ಎಂದು ನನ್ನ ಅಭಿಪ್ರಾಯ. ಬಹಳ ಕಾಂಟ್ರವರ್ಷಿಯಲ್ ಸೆಕ್ಷನ್ ಯಾವುದೆಂದರೆ ವೈಸ್ ಚಾನ್ಸಲರ್ ನೇಮಕ ಮಾಡತಕ್ಕ ಅಧಿಕಾರವನ್ನು ಸಂಪೂರ್ಣವಾಗಿ ಸರ್ಕಾರ ತೆಗೆದುಕೊಳ್ಳತಕ್ಕದ್ದು. ಬಹುಶಃ ಆಂಧ್ರಪ್ರದೇಶದ ಸರ್ಕಾರ ಮಾಡಿರುವುದನ್ನು ನೋಡಿ ತಾವು ಈ ತೀರ್ಮಾನ ತೆಗೆದುಕೊಂಡಿದ್ದೀರಿ ಎಂದು ನನಗನಿಸುತ್ತದೆ. ಆದರೆ ಆಂಧ್ರಪ್ರದೇಶದಲ್ಲಿರುವಂತೆ ಪ್ರಬಲವಾದ ಸರ್ಕಾರ ನಮ್ಮ ರಾಜ್ಯದಲ್ಲಿ ಇಲ್ಲ. ಆಂಧ್ರಪ್ರದೇಶ ಸರ್ಕಾರ ಕೇಂದ್ರದಲ್ಲಿ ಏನೇ ಕೆಲಸ ಬೇಕಾದರೂ ಮಾಡಿಸಿಕೊಳ್ಳುತ್ತದೆ. ಎಷ್ಟು ಕೋಟಿ ರೂಪಾಯಿ ಬೇಕಾದರೂ ಸ್ಯಾಂಕ್ಷನ್ ಮಾಡಿಸಿಕೊಳ್ಳುತ್ತದೆ. ಚಾನ್ಸಲರ್‌ಗೆ ಇರತಕ್ಕ ಅಧಿಕಾರವನ್ನು ತಾವು ಸರ್ಕಾರಕ್ಕೆ ತೆಗೆದುಕೊಂಡರೆ ಯುಜಿಸಿಯವರು ಖಂಡಿತಾ ನಿಮಗೆ ಗ್ರಾಂಟ್ ಕೊಡುವುದಿಲ್ಲ. ಕೊಡಬಾರದೆಂದು ಎಲ್ಲೂ ಇಲ್ಲ, ಆದರೆ ಅವರು ಕೊಡುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ನಾನು ಶಿಕ್ಷಣ ಸಚಿವನಾಗಿದ್ದಾಗ ಹಂಪಿಯಲ್ಲಿ ಕನ್ನಡ ಯೂನಿವರ್ಸಿಟಿ ಮಾಡಿದಾಗ ಅದರ ಚಾನ್ಸಲರ್ ಆಗಿ ಮುಖ್ಯಮಂತ್ರಿಗಳನ್ನು ಮಾಡಿಕೊಂಡಿದ್ದೆವು. ಯುಜಿಸಿಯವರು ಅದಕ್ಕೆ ಗ್ರಾಂಟ್ ಕೊಡುತ್ತಿರಲಿಲ್ಲ. ಆಗ ನಾನು ನಮ್ಮ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲ್‌ರವರಿಗೆ ಹೇಳಿದೆ, ನಿಮಗೆ ಕಿರೀಟ ಬೇಕೋ ಹಣ ಬೇಕೋ ಅಂತ. ಅದಕ್ಕೆ ಅವರು ನನಗೆ ಕಿರೀಟ ಬೇಡ ಯೂನಿವರ್ಸಿಟಿಗೆ ಹಣಬೇಕೆಂದು ಹೇಳಿದರು. ಅದನ್ನು ನಮ್ಮ ಸರ್ಕಾರ ಬದಲಾವಣೆ ಮಾಡಿ ಚಾನ್ಸಲರ್ ಮುಖ್ಯಮಂತ್ರಿಗಳು ಎಂಬುದನ್ನು ತೆಗೆದು ರಾಜ್ಯಪಾಲರು ಚಾನ್ಸಲರ್ ಎಂದು ಮಾಡಿದ್ದೇವೆ. ಆಗ 10 ಕೋಟಿ ರೂಪಾಯಿ ಗ್ರಾಂಟ್ ಬಂತು. ಈ ಪರಿಸ್ಥಿತಿ ಇರುವಾಗ ಅಧಿಕಾರವನ್ನು ಸಂಪೂರ್ಣವಾಗಿ ಕಿತ್ತುಕೊಂಡು ಹೀಗೆ ಮಾಡಿದರೆ ಬಹುಶಃ ಇದು ರಾಜಕೀಯ

ನೇಮಕಾತಿಯಾಗುತ್ತದೆ ಎನ್ನುವುದರಲ್ಲಿ ಎರಡನೆಯ ಮಾತಿಲ್ಲ. ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸದಸ್ಯರುಗಳನ್ನು ಅಪಾಯಿಂಟ್‌ಮೆಂಟ್ ಮಾಡುತ್ತಿದ್ದೇವೆ. ಯಾರ್ಯಾರನ್ನು ಮಾಡುತ್ತಿದ್ದೇವೆಂದು ಹೇಳಿಕೊಳ್ಳುವುದಕ್ಕೆ ನಮಗೆ ನಾಚಿಕೆಯಾಗುತ್ತಿದೆ. ನಾನು ಹೆಸರುಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ಆ ತರಹ ಆಗಿದೆ. ನನ್ನ ಸಲಹೆ ಏನೆಂದರೆ ಅದನ್ನು ಏನು ಮಾಡಬಹುದು ಎಂದರೆ ಸರ್ಚ್‌ಕಮಿಟಿ ಅಂತ ಇದೆ. ಅಲ್ಲಿ ಇವತ್ತು ಸರ್ಕಾರದ ಒಂದು ನಯಾಪೈಸೆಯಷ್ಟು ಹಸ್ತಕ್ಷೇಪ ಇಲ್ಲವೇ ಇಲ್ಲ. ಆದರೆ ಸರ್ಕಾರ ತೆಗೆದುಕೊಳ್ಳುವುದಕ್ಕೆ ಒಂದು ವಿಧಾನ ಇದೆ. ಈ ಸರ್ಚ್‌ಕಮಿಟಿಯಲ್ಲಿ ಸರ್ಕಾರದ ನಾಮಿನಿ ಒಬ್ಬರು ಇರತಕ್ಕದ್ದು ಸೂಕ್ತ. ಏಕೆಂದರೆ ಸರ್ಕಾರದ ಪಾಲಿಸಿ, ಸಾಮಾಜಿಕ ಕಳಕಳಿ, ಚಿಂತನೆ, ನೀತಿ ನಿಯಮ ಇದನ್ನು ಈ ಸರ್ಚ್ ಕಮಿಟಿಯಲ್ಲಿ ಸರ್ಕಾರದ ಪ್ರತಿನಿಧಿಗಳು ಯಾರು ಇರುತ್ತಾರೆ, ಅವರು ಹೇಳಬಹುದು. ನೋಡಿ ಇಷ್ಟು ಏಳೆಂಟು ವಿಶ್ವವಿದ್ಯಾನಿಲಯಗಳು ಇವೆ, ಇವುಗಳಲ್ಲಿ ಈ ಜಾತಿಯವರು ಇಂತಿಂಥವರು ಇದ್ದಾರೆ, ಏಕೆಂದರೆ ಇಲ್ಲಿ ಜಾತಿ ಬಿಟ್ಟು ಏನೂ ನಡೆಯುತ್ತಿಲ್ಲ. ಸಾಮಾಜಿಕ ನ್ಯಾಯದ ಬಗ್ಗೆ ನೇಮಕ ಮಾಡತಕ್ಕದ್ದರಲ್ಲಿ, ಮತ್ತು ಎಕ್ಸ್‌ಟೆಂಡ್ ಮಾಡತಕ್ಕದ್ದರಲ್ಲಿ ತಾವು ಬರಬೇಕಾಗುತ್ತದೆ. ಬಡ್ತಿ ಕೊಡಬೇಕಾದಾಗ ಅಥವಾ ಟರ್ಮ್ ಎಕ್ಸ್‌ಟೆಂಡ್ ಮಾಡಬೇಕಾದರೆ ಅದು ಬೇಕಾಗುತ್ತದೆ. ಆವಾಗ ಆ ಒಂದು ಸರ್ಚ್ ಕಮಿಟಿಗೆ ಒಂದು ಆದೇಶವನ್ನು ಕೊಡಬೇಕಾಗುತ್ತದೆ ಮತ್ತು ಭಾಗವಹಿಸಬೇಕಾದ ಸರ್ಕಾರದ ಪ್ರತಿನಿಧಿ ಸರ್ಕಾರದ ನೀತಿ ಈ ರೀತಿ ಇದೆ, ಇಂತಹ ಕಮ್ಯುನಿಟಿಗಳಿಗೆ ನ್ಯಾಯ ಒದಗಿಸಿಕೊಡಬೇಕಾಗುತ್ತದೆ ಇಂತಹವರನ್ನು ನಾವು ಮಾಡಬೇಕಾಗುತ್ತದೆ ಎಂದು ಇಂತಹ ಗೈಡ್‌ಲೈನ್ಸ್ ಕೊಡುವುದಕ್ಕೆ ಸರ್ಕಾರದ ಪ್ರತಿನಿಧಿ ಅಲ್ಲಿದ್ದರೆ ಅನುಕೂಲವಾಗುತ್ತದೆ. ಅದು ಬಿಟ್ಟು ಸರ್ಕಾರವೇ ತೆಗೆದುಕೊಳ್ಳತಕ್ಕದ್ದು ಸರಿಯಲ್ಲ. ಈಗ ಯಾವ ರೀತಿ ತೆಗೆದಿದ್ದಾರೆ ಎಂದರೆ ಸರ್ಚ್ ಕಮಿಟಿಯನ್ನು ನಾಮಕರಣ ಮಾಡತಕ್ಕಂಥಾದ್ದು ಸರ್ಕಾರ. ಅದರಲ್ಲಿ, ಚಾನ್ಸಲರ್ ಒಬ್ಬರನ್ನು ನೇಮಕ ಮಾಡುತ್ತಾರೆ, ಸಿಂಡಿಕೇಟ್‌ನಿಂದ ಒಬ್ಬರು, ಯು.ಜಿ.ಸಿ.ಯಿಂದ ಇಬ್ಬರು ಮತ್ತು ಸರ್ಕಾರದವರು ಒಬ್ಬರು, ಹೀಗೆ ಈ ಸರ್ಚ್ ಕಮಿಟಿಯವರು ಮೂರು ಹೆಸರುಗಳನ್ನು ಸರ್ಕಾರಕ್ಕೆ ಕೊಡುತ್ತಾರೆ. ಸರ್ಕಾರ ಅವರಲ್ಲಿ ಯಾರನ್ನು ನೇಮಕ ಮಾಡಬೇಕೆಂದು, ನಿರ್ಣಯ ಮಾಡುತ್ತಾರೆ. ಈಗ ಪಬ್ಲಿಕ್ ಸರ್ವಿಸ್ ಕಮಿಷನ್ ಮೆಂಬರ್‌ಸ್ಸನ್ನು ಯಾವರೀತಿ ಸರ್ಕಾರ ಕ್ಯಾಬಿನೇಟ್ ಡಿಸಿಶನ್ ಮಾಡಿ ರಾಜ್ಯಪಾಲರಿಗೆ ಕಳಿಸಿಕೊಡುತ್ತಾರೋ ಮತ್ತು ಅದನ್ನು ಅವರು ಅಪ್ರೂವ್ ಮಾಡುತ್ತಾರೆ, ಅದೇರೀತಿ ಇಲ್ಲಿ ಆಗುತ್ತಿದೆ. ಅದು ಪ್ರಜಾತಂತ್ರ ವ್ಯವಸ್ಥೆಗೆ ಬಹಳ ಧಕ್ಕೆಯುಂಟಾಗುತ್ತದೆ. ನಮಗೂ ಕೂಡ ಕೆಟ್ಟ ಹೆಸರು ಬರುತ್ತದೆ. ಬಹುಶಃ ಒಂದೆರಡು ಘಟನೆಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ಈ ಸರ್ಕಾರ ಅಧಿಕಾರವನ್ನು ತೆಗೆದುಕೊಳ್ಳತಕ್ಕದ್ದು ಇದೆಯಲ್ಲ, ಅದು ಸರಿಯಲ್ಲ. ಈ ಸರ್ಚ್ ಕಮಿಟಿಯಲ್ಲಿ ಸರ್ಕಾರದ ಒಬ್ಬ ಪ್ರತಿನಿಧಿ ಇರಲಿ. ಈ ಅಧಿಕಾರ ಚಾನ್ಸಲರ್‌ಗಳಿಗೆ, ಗವರ್ನರ್‌ಗೆ ಇರಲಿ. ಇದನ್ನು ತಾವು ಬಹಳ ತೀಕ್ಷ್ಣವಾಗಿ ಪರಿಗಣಿಸಬೇಕೆಂದು ನನ್ನ

ಒಂದು ಅನಿಸಿಕೆ. ಮತ್ತೆ ಇನ್ನೊಂದು ಟರ್ಮ್. ಈ ಮೂರು ವರ್ಷಗಳಿಗೆ ಒಂದು ಟರ್ಮ್ ಎಂದು ಇದೆ. ಇದರಲ್ಲೂ ರಾಜಕೀಯ ನಡೆಯುತ್ತಿದೆ ಮತ್ತು ಈಗ ಇದು ತಮಗೂ ಅನುಭವ ಆಗಿದೆ. ಈ ವಿಶ್ವವಿದ್ಯಾಲಯಗಳಲ್ಲಿ ಪರಿಶಿಷ್ಟ ಜಾತಿಯವರು, ಹಿಂದುಳಿದವರು ಇವರಿಗೆ ಎರಡು ಟರ್ಮ್ ಯಾರಿಗೂ ಸಿಕ್ಕಿಲ್ಲ. ಎರಡು ಟರ್ಮ್ ಯಾರಿಗೆ ಸಿಕ್ಕಿದೆ ಎಂದರೆ ಪ್ರಬಲವಾಗಿರತಕ್ಕಂಥ ಮೇಲು ಜಾತಿಯವರು, ಅವರ ಮೇಲೆ ಎಷ್ಟೇ ದೂರುಗಳು ಇರಲಿ, ಎಷ್ಟೇ ಆಯೋಗಗಳನ್ನು ರಚನೆ ಮಾಡಿರಲಿ, ಏನೇ ವಿಚಾರಣೆ ನಡೆದಿರಲಿ; ಅದರೂನು ಇನ್ನೊಂದು ಟರ್ಮ್ ತೆಗೆದುಕೊಂಡು ಎರಡು ಟರ್ಮ್ ಮಾಡಿದವರು ಇದ್ದಾರೆ. ಇದು ತಮಗೂ ಅನುಭವ ಇದೆ. ಆದರೆ ಇಲ್ಲಿ ಎಷ್ಟು ದಕ್ಷತೆಯಿಂದ, ಉತ್ತಮವಾಗಿ ಕೆಲಸ ಮಾಡತಕ್ಕಂಥವರು ಪರಿಶಿಷ್ಟ ಜಾತಿಯವರು, ಹಿಂದುಳಿದವರು ಯಾರೇ ಇದ್ದರೂ, ಅವರಿಗೆ ಒಂದು ಟರ್ಮ್ ಮೇಲೆ ಇನ್ನೊಂದು ಟರ್ಮನ್ನು ಕೊಟ್ಟಿಲ್ಲ. ಅದಕ್ಕೆ ಉದಾಹರಣೆಗಳನ್ನು ಬೇಕಾದಷ್ಟು ಕೊಡಬಹುದು. ಅವರು ಡಾ: ವೈ.ಸಿ. ರುದ್ರಪ್ಪ ಅಂತ ಉತ್ತಮವಾದಂಥ ವೈಸ್ ಛಾನ್ಸಲರ್ ಇರಬಹುದು, ಸೆಲ್ವಿದಾಸ್ ಇರಬಹುದು, ಮುನಿಯಮ್ಮ ಇರಬಹುದು, ಜೆಲುವರಾಜು ಯಾರು ಬೇಕಾದರೂ ಆಗಬಹುದು. ಆದ್ದರಿಂದ ನಾನು ಹಿಂದೆ ಅದನ್ನು ಯೋಚನೆ ಮಾಡಿದ್ದೆ. ಯಾರೇ ಆಗಲಿ ಒಂದು ಟರ್ಮ್ ಎಂದರೆ ಅದು ಐದು ವರ್ಷ ಇರತಕ್ಕದ್ದು. ಇನ್ನೊಂದು ಹೆಚ್ಚಿಗೆ ಟರ್ಮ್‌ನ್ನು ಯಾರಿಗೂ ಕೊಡಬಾರದು. ಈಗ ಏನಾಗಿದೆ ಎಂದರೆ ನಲ್ಲಿ ಇಟ್ಟಿದ್ದೀರಿ, extendable by another term ಎಂದು. ಆದ್ದರಿಂದ ಅದನ್ನು ತಾವು ಪರಿಗಣಿಸಬೇಕು ಎನ್ನತಕ್ಕದ್ದು ನನ್ನ ಒಂದು ಅನಿಸಿಕೆ. ಮತ್ತೆ ಇನ್ನೊಂದು ಚಾಪ್ಟರ್ 1ರಲ್ಲಿ ತಾವು ಸೇರಿಸಿದ್ದೀರಿ. ಹಿಂದೆ ಮೈನಾರಿಟಿ ಅಂತ ಮಾತ್ರ ಒಂದು ಇತ್ತ ಮೈನಾರಿಟಿ ಎಂದರೆ ಯಾರು ಬೇಕಾದರೂ 'ಮೈನಾರಿಟಿ' ಎಂದು ಆಗುತ್ತಿತ್ತು. ಇವಾಗ ಮೈನಾರಿಟಿ ಎಂದರೆ 'ರಿಲೀಜಿಯಸ್ ಮೈನಾರಿಟಿ' ಎಂದು ಹೇಳಿ ನಾಮಿನೇಶನ್ ಮಾಡತಕ್ಕದ್ದನ್ನು ಇಟ್ಟುಕೊಂಡಿದ್ದೀರಿ. ಅದರ ಜೊತೆಗೆ ಎಸ್‌ಸಿ/ಎಸ್‌ಟಿ ಒಬ್ಬರು ಇರುತ್ತಾರೆ. ಬ್ಯಾಕ್‌ವರ್ಡ್ ಕ್ಲಾಸ್ ಎಂದರೆ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರು ಅಂತ ಮಾಡಿದ್ದೀರಿ. ಮತ್ತೆ ಚಾಪ್ಟರ್ 2ರಲ್ಲಿ ಅದೆಲ್ಲ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕೆಲವು ಸಲಹೆಗಳನ್ನು ಮಾತ್ರ ನಾನು ಕೊಡುವುದಕ್ಕೆ ಇಚ್ಛಿಸಿದುತ್ತಿದ್ದೇನೆ. ಮತ್ತೆ ಅಫಿಸರ್ಸ್ ಆಫ್ ದಿ ಯೂನಿವರ್ಸಿಟಿ ಈಗ ಏನಾಗಿದೆ ಎಂದರೆ ಸರ್ಕಾರ ಯಾವ ಅಧಿಕಾರವನ್ನು ಇಟ್ಟುಕೊಳ್ಳಬೇಕು, ಆ ಅಧಿಕಾರವನ್ನು ಯಾವ ರೀತಿ ಚಲಾಯಿಸಬೇಕು, ವಿಶ್ವವಿದ್ಯಾಲಯಕ್ಕೆ ಯಾವ ಅಧಿಕಾರ ಇರಬೇಕು ಎನ್ನತಕ್ಕಂಥಾದ್ದು ಬಹಳ ಪ್ರಮುಖವಾದುದು. ನನ್ನ ಅಭಿಪ್ರಾಯದಲ್ಲಿ- University should be given academic autonomy. There should not be an iota of interference as far as academic matters are concerned. ಈಗ ಒಂದು ಅಪಾಯಿಂಟ್‌ಮೆಂಟ್ ಆಫ್ ಪ್ರೊಫೆಸರ್ಸ್ ಇರಬಹುದು, ಅಥವಾ ರೀಡರ್ಸ್ ಇರಬಹುದು,

ಅಥವಾ ಗೈಡ್ ಇರಬಹುದು, ಯಾವುದೇ ಇರಬಹುದು, ಅದನ್ನು ಮತ್ತೆ ಸರ್ಕಾರಕ್ಕೆ ತಂದು ಅಪ್ರೂವಲ್ ತೆಗೆದುಕೊಳ್ಳಬೇಕು ಎನ್ನಬಹುದು ಇರಬಾರದು. ಮತ್ತೆ ಯಾವ ಫ್ಯಾಕಲ್ಟಿಗಳನ್ನು ಸ್ಥಾಪನೆ ಮಾಡಬೇಕು, ಯಾವ ಫೋಸ್ಟ್-ಗ್ರ್ಯಾಜುಯೇಶನ್ ಸ್ಥಾಪನೆ ಮಾಡಬೇಕು, ಮುಂದಕ್ಕೆ ಯಾವ ರೀತಿ ಹೆಚ್ಚಿಸಬೇಕು, ಶಿಕ್ಷಣವನ್ನು ಯಾವ ರೀತಿ ಹೆಚ್ಚಿಸಬೇಕು ಮತ್ತು ವಿದ್ಯಾರ್ಥಿಗಳಿಗೆ ಸೀಮಿತವಾದಂಥ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಟಿಯಿಂದ ಸಂಪೂರ್ಣ ಅಧಿಕಾರ ವೈಸ್-ಛಾನ್ಸಲರ್‌ಗೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಇರಬೇಕು. ಆದರೆ administrative power, administrative autonomy should be with Government. ಆದರೆ, ಪ್ರತಿಯೊಂದು ಫೈಲು ಸರ್ಕಾರಕ್ಕೆ ಬರಬೇಕು ಎಂದು ಅಲ್ಲ. ಸರ್ಕಾರ ನಿರ್ದೇಶನ ಕೊಟ್ಟರೆ ಅಲ್ಲಿ ಒಬ್ಬ ಅಧಿಕಾರಿ ಅದು ಟ್ರಾನ್ಸ್‌ಫರ್ ಪಾಲಿಸಿ ಇರಬಹುದು, ರಿಕ್ರೂಟ್‌ಮೆಂಟ್ ಪಾಲಿಸಿ ಇರಬಹುದು, ಫೈನಾನ್ಷಿಯಲ್ ಪಾಲಿಸಿ ಇರಬಹುದು, ಯಾವುದೇ ಪಾಲಿಸಿಯನ್ನು ಅಬ್ಜೆಕ್ಟಿವ್ಆಗಿ ಯಾವುದೇ ಭಯಭೀತಿ ಅಥವಾ ಶಿಫಾರಸ್ಸುಗಳಿಗೆ ಮಣಿಯದೆ ನಡೆಸಿಕೊಂಡು ಹೋಗಬಹುದಂಥ ಒಬ್ಬ ರಾಜ್ಯ ಸರ್ಕಾರದ ಅಧಿಕಾರಿ ಇರಬೇಕು. ಅದಕ್ಕೆ ನಾನು ಮೊದಲು ಒಂದು ಸೂಚನೆ ಮಾಡಿದ್ದೆ; ಏನೆಂದರೆ ರಿಜಿಸ್ಟ್ರಾರ್ ಜನರಲ್ ಅಥವಾ ಚೀಫ್ ರಿಜಿಸ್ಟ್ರಾರ್ ಎಂದು ಸೂಪರ್ ಟೈಮ್‌ಸ್ಕೇಲ್ ಆಫೀಸರ್‌ನ್ನು ಅಲ್ಲಿ ಹಾಕಿ ಎಂದು. ಅವರ ಕೆಳಗಡೆ ವಿಶ್ವವಿದ್ಯಾನಿಲಯ ನೇಮಕ ಮಾಡತಕ್ಕಂಥ ರಿಜಿಸ್ಟ್ರಾರ್ ಆಫ್ ಅಕಾಡೆಮಿ, ರಿಜಿಸ್ಟ್ರಾರ್ ಆಫ್ ಇವಾಲ್ಯುಯೇಶನ್ ಅದೆಲ್ಲ ವಿಶ್ವವಿದ್ಯಾನಿಲಯದವರು ಅಪಾಯಿಂಟ್ ಮಾಡಿಕೊಳ್ಳುತ್ತಾರೆ. These two people will work under Registrar General or Chief Registrar. ನಾನು ಚೀಫ್ ರಿಜಿಸ್ಟ್ರಾರ್ ಎಂದು ನನ್ನ ಮಸೂದೆಯಲ್ಲಿ ಹಾಕಿದ್ದೇನೆ. ಆ ಸೂಪರ್ ಟೈಮ್‌ಸ್ಕೇಲ್ ಆಫೀಸರ್ ಇದ್ದರೆ ಅವರು ಯಾರಿಗೂ ಮಣಿಯುವುದಿಲ್ಲ, ಅವರು ಸರ್ಕಾರದ ಪ್ರತಿನಿಧಿಯಾಗಿ ಅಲ್ಲಿರುತ್ತಾರೆ. ಆಡಳಿತಾತ್ಮಕವಾದ ಸಂಪೂರ್ಣ ಜವಾಬ್ದಾರಿ ಅವನಿಗೆ ಇರುತ್ತದೆ. ಆವಾಗ ಪ್ರತಿಯೊಂದು ಫೈಲು ಸರ್ಕಾರಕ್ಕೆ ಬರಬೇಕಾದ ಅವಶ್ಯಕತೆ ಇರುವುದಿಲ್ಲ. ಆದ್ದರಿಂದ-University will be autonomous in everything. It will have administrative autonomy. It will have administrative autonomy and academic autonomy. Administrative autonomy will be enforced by/through the Chief Registrar. ಮಾನ್ಯ ಸಭಾಧ್ಯಕ್ಷರೇ, ಪಾತ್ರೆಯ ಒಳಗಡೆ ಇರತಕ್ಕಂಥ ಅನ್ನವನ್ನು ತೆಗೆಯಬೇಕಾದರೆ ಸೌಟನ್ನು ಉಪಯೋಗಿಸಬೇಕೇ ಹೊರತು ಕೈಯನ್ನು ಹಾಕುವುದಲ್ಲ. ನೀವು ಪ್ರತಿಯೊಂದಕ್ಕೂ ಕೈಯನ್ನೇ ಹಾಕತಕ್ಕಂಥ ಪ್ರಯತ್ನ ಮಾಡಿದ್ದೀರಿ. ಆದ್ದರಿಂದ ಚೀಫ್ ರಿಜಿಸ್ಟ್ರಾರ್ ಮುಖಾಂತರ ಮಾಡತಕ್ಕದ್ದು ಒಳ್ಳೆಯದು. ಮತ್ತೆ ಫೈನಾನ್ಸ್ ಆಫೀಸರ್-ಇದು ತಾವು ಒಪ್ಪಿಕೊಂಡಿದ್ದೀರಿ. ಆವಾಗ ಯಾವ ಪ್ರಮೋಶನ್ ಆಗಲಿ, ಅಪಾಯಿಂಟ್‌ಮೆಂಟ್ ಆಗಲಿ, ಸರ್ಕಾರದ ಪಾಲಿಸಿಯನ್ನು ಉಲ್ಲಂಘನೆ ಮಾಡತಕ್ಕಂಥ ಪ್ರಮೇಯ ಬರುವುದಿಲ್ಲ. ಅವನು ಬಹಳ

ಭದ್ರವಾಗಿ ಅಲ್ಲಿ ಇರುತ್ತಾರೆ. ಏಕೆಂದರೆ-he will be on par with the Vice Chancellor. ವೈಸ್ ಚಾನ್ಸಲರ್ ಸೆಕ್ರೆಟರಿ ಲೆವಲ್‌ನಲ್ಲಿ ಇರುತ್ತಾರೆ, ಸೂಪರಿಂಟೆಂಡಿಂಗ್ ಸ್ಕೇಲ್ ಆಫೀಸರ್ ಸೆಕ್ರೆಟರಿ ಲೆವಲ್‌ನಲ್ಲಿ ಇರುತ್ತಾರೆ; ಹೀಗಾಗಿ ವೈಸ್-ಚಾನ್ಸಲರ್ ಹೇಳಿದ್ದು ಎಲ್ಲವನ್ನೂ ಆತ ಮಾಡುವುದಕ್ಕೆ ಹೋಗುವುದಿಲ್ಲ. ಇಲ್ಲದಿದ್ದರೆ ಏನಾಗುತ್ತದೆ ಎಂದರೆ he will yield to the pressure of the Vice Chancellor. ಇದು ತಮಗೂ ಗೊತ್ತಿದೆ. ಆದ್ದರಿಂದ ಇಷ್ಟು ಡ್ರಾಸ್ಟಿಕ್ ಆಗಿ ತಂದಿದ್ದೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ಬೇರೆ ಎಕ್ಸಾಮಿನೇಶನ್ ಮ್ಯಾಂಡಿಟರಿ ಮಾಡಬಹುದು ಅದನ್ನು ನಾನು ಸ್ವಾಗತಿಸುತ್ತೇನೆ. ಇವತ್ತು ಸ್ಟೇಟ್ ಅಡ್ಮಿನಿಸ್ಟ್ರೇಟಿವ್ ಟ್ರಿಬುನಲ್‌ಗೆ, ಈ ರಿಪಬ್ಲಿಕ್‌ನ ಜನರಲ್, ಚೀಫ್ ಜನರಲ್, ಚೀಫ್ ರಿಪಬ್ಲಿಕ್‌ನ್ನು ಸರ್ಕಾರ ನೇಮಕ ಮಾಡುತ್ತೆಂದಾದ್ದು ಬಹಳ ಒಳ್ಳೆಯದೆಂದು ನನ್ನ ಒಂದು ಸಲಹೆ. ಆಮೇಲೆ Board of Studies ಗೆ ನಿಮ್ಮ ಆಕ್ಟ್‌ನಲ್ಲಿ ಯಾರೂ ಸಹ ವೀಕರ್ ಸೆಕ್ಷನ್ಸ್, ಒ.ಬಿ.ಸಿ.ಯಾಗಲಿ, ಎಸ್‌ಸಿ/ಎಸ್‌ಟಿಯಾಗಲೀ ಪ್ರಾತಿನಿಧ್ಯ ಇಲ್ಲ. ಏಕೆಂದರೆ ನಾನು ಇದ್ದಾಗಲೂ ಅನೇಕ ಜನ ಬಂದು ದೂರುಗಳನ್ನು ಹೇಳುತ್ತಿದ್ದರು. ನಮ್ಮನ್ನು ಯಾವುದೇ Board of Studies ನಲ್ಲಿ ಹಾಕಿಕೊಳ್ಳುವುದಿಲ್ಲ, ಸಮರ್ಥರಿದ್ದರೂ ಕ್ವಾಲಿಫೈಡ್ ಪ್ರೊಫೆಸರ್ ಆದರೂ ಹಾಕಿಕೊಳ್ಳುವುದಿಲ್ಲ, ಎಂದು ಹಿಂದುಳಿದವರು, ಅಲ್ಪಸಂಖ್ಯಾತರು ಮತ್ತು ಎಸ್‌ಸಿ/ಎಸ್‌ಟಿಯವರು ಬಂದು ದೂರು ಕೊಡುತ್ತಿದ್ದರು. ಆದ್ದರಿಂದ ನಾವು ಇಟ್ಟುಕೊಂಡಿದ್ದೆವು representation should be given to O.B.C./SC.ST ಅದನ್ನು ತಾವು ಸೇರಿಸಿಕೊಂಡರೆ ಬಹಳ ಒಳ್ಳೆಯದೆಂದು ನನ್ನ ಅನಿಸಿಕೆ. ಮತ್ತೆ- There should be reservation in the Board of Appointment of Examiners ಅದನ್ನು ತಾವು ಏಕೆ ಬಿಟ್ಟುಬಿಟ್ಟಿದ್ದೀರೋ ಗೊತ್ತಾಗುವುದಿಲ್ಲ. ಏಕೆಂದರೆ ಬೋರ್ಡ್ ಆಫ್ ಅಪಾಯಿಂಟ್‌ಮೆಂಟ್ ಆಫ್ ಎಕ್ಸಾಮಿನರ್ಸ್ ಅಂತ ಅಲ್ಪಸಂಖ್ಯಾತರಿಗೆ ಆಗಲಿ, ಕ್ವಾಲಿಫೈಡ್ ಕಾಂಪಿಟೆಂಟ್ ಆದರೂ ಕೂಡ ಅವರನ್ನು ಎಕ್ಸಾಮಿನೇಶನ್ ವರ್ಕ್‌ಗೆ ತಗೆದುಕೊಳ್ಳುವುದಿಲ್ಲ. ಆದ್ದರಿಂದ ಅದರಲ್ಲಿ ರಿಸರ್ವೇಶನ್ ಇರತಕ್ಕದ್ದು ಬಹಳ ಒಳ್ಳೆಯದೆಂದು ನನ್ನ ಅನಿಸಿಕೆ. powers

6.50 ಪಿ.ಎಂ.

of Government for direct auditing, ಆಡಿಟ್ ಯಾವಾಗ ಆಗುತ್ತಿತ್ತೋ ಏನೋ, ವರದಿ ಕೊಡದೇ ಗೊತ್ತೇ ಆಗುತ್ತಿರಲಿಲ್ಲ. ಈಗ ಪ್ರತಿ ವರ್ಷ ಅಕೌಂಟೆಂಟ್ ಜನರಲ್‌ರವರೇ ಆಡಿಟ್ ಮಾಡಬೇಕೆಂದು ಮಾಡಿರುವುದು ಬಹಳ ಒಳ್ಳೆಯದು. ಮತ್ತೆ ಇನ್ನೊಂದು ವಿಷಯವನ್ನು ನಾನು ಪುನೀರುಚ್ಚರಿಸುತ್ತೇನೆ. ಜಸ್ಟೀಸ್ ಜಗನ್ನಾಥ ಶೆಟ್ಟಿಯವರು 4 ನೇ ವೇತನ ಆಯೋಗದ ವರದಿಯನ್ನು ಕೊಟ್ಟಿದ್ದರು. ಅವರ ವರದಿಯಲ್ಲಿ ಏನು ಹೇಳಿದ್ದಾರೆಂದರೆ, ಯೂನಿವರ್ಸಿಟಿಗೆ ಅಕಾಡೆಮಿಕ್ ಅಟಾನಮಿ ಕೊಡಬೇಕು. But administrative powers should be with the Government ಎಂದು ಅವರೇ ಹೇಳಿದ್ದಾರೆ. ತಾವು

ಆ ಬೆಂಬಲವನ್ನು ತೆಗೆದುಕೊಳ್ಳಬಹುದು. ಅವರು 4 ನೇ ವೇತನ ಆಯೋಗದ ವರದಿ ಕೊಡುವಾಗ, ಈ ಯೂನಿವರ್ಸಿಟಿಗಳಲ್ಲಿ ಆಗತಕ್ಕ ಅವ್ಯವಹಾರಗಳನ್ನೆಲ್ಲಾ ನೋಡಿ ಸಾಕಾಗಿ ಈ ರೀತಿ ಹೇಳಿದ್ದಾರೆ. ಏಕೆಂದರೆ, ಪ್ರಿನ್ಸಿಪಾಲರುಗಳಿಗೆ ಒಂದು ಲೀವ್ ಲೆಟರ್ ಬರೆಯುವುದೇ ಗೊತ್ತಿಲ್ಲ. ಲೀವ್ ಸ್ಯಾಂಕ್ಷನ್ ಮಾಡುವುದು ಯಾವ ಪ್ರಾವಿಷನ್‌ನಲ್ಲಿ ಎಂಬುದೇ ಪ್ರಿನ್ಸಿಪಾಲರುಗಳಿಗೆ ಗೊತ್ತಾಗುವುದಿಲ್ಲ. ಅವರು ಪಾಠ ಮಾಡುವುದನ್ನು ಬಿಟ್ಟರೆ, ಅವರಿಗೆ ಈ ಸರ್ವೀಸ್ ಕಂಡೀಷನ್ಸ್, ರೂಲ್ಸ್ ಏನೇನೂ ಗೊತ್ತಿಲ್ಲ. ಅಂತಹವರನ್ನು ತಂದು ಇಲ್ಲಿ ಎಕ್ಸಿಕ್ಯುಟಿವ್ ಹೆಡ್ ಆಗಿ ಕೂಡಿಸಿಬಿಟ್ಟರೆ, ಅವರು ಏನು ಮಾಡುತ್ತಾರೆ? ನನಗೆ ಆ ಅನುಭವ ಆಗಿದೆ. ಪ್ರಿನ್ಸಿಪಾಲರುಗಳು ಲೀವ್ ಸ್ಯಾಂಕ್ಷನ್ ಮಾಡಬೇಕಾದರೆ ಸೆಕೆಂಡ್ ಡಿವಿಜನ್ ಕ್ಲರ್ಕ್‌ಗಳನ್ನೇ ಕೇಳಬೇಕು. ಹೀಗಿರುವಾಗ, ಅವರಿಗೆ ಅಡ್ಮಿನಿಸ್ಟ್ರೇಟಿವ್ ಪವರ್ ಕೊಡುವುದಕ್ಕಿಂತ, ಅಧಿಕಾರಿಗಳನ್ನು ಇಟ್ಟುಕೊಂಡು ಕೆಲಸ ಮಾಡಿಸುವುದು ಒಳ್ಳೆಯದು. ಅವರಿಗೆ, ಅಕಾಡೆಮಿಕ್ ಪವರ್ಸ್ ಕೊಡಿ. ಯಾವರೀತಿ ಸಿಲೆಬಸ್ ಪ್ರಕಾರ ಪಾಠ ಹೇಗೆ ಮಾಡಬೇಕು, ಇತ್ಯಾದಿ ಎಲ್ಲಾ ವಿಚಾರಗಳಲ್ಲಿ ಡಿಸಿಪ್ಲಿನ್ ಮಾಡಿ. In Chapter 8, Appointment of Teachers. "Four experts to be nominated by the Chancellor on the recommendation of the State Government from among the persons serving in any University of the State or any other institutions recognised by the State Government of whom one shall be a person belonging to SC/ST and another to the other backward classes. ಅದೆಲ್ಲಾ ಸರಿ. ಆದರೆ, ರಾಜ್ಯ ಸರ್ಕಾರದ ಶಿಫಾರಸ್ಸಿನ ಮೇರೆಗೆ ಎಂದು ಹೇಳಿದ್ದೀರಿ. ಎಕ್ಸಪರ್ಟ್ ವಿಷಯ ಗವರ್ನಮೆಂಟಿಗೆ ಬರತಕ್ಕ ಅವಶ್ಯಕತೆ ಇಲ್ಲ. ಹಾವು ಗೈಡ್‌ಲೈನ್ಸ್ ಕೊಟ್ಟು ಯಾವರೀತಿ ವಿಷಯದಲ್ಲಿ ತಜ್ಞರಾಗಿರುವ ಶಿಕ್ಷಕರಿರಬೇಕು ಎಂಬುದರ ಬಗ್ಗೆ ಆ ಯೂನಿವರ್ಸಿಟಿಗೆ ಅಧಿಕಾರ ಕೊಡತಕ್ಕಂತಾದ್ದು ಆಗಬೇಕು. ಪ್ರತಿಯೊಂದೂ ಸರ್ಕಾರಕ್ಕೆ ತೆಗೆದುಕೊಳ್ಳುವುದು ಸರಿಯಲ್ಲ. ಅಲ್ಲಿ ರಿಜಿಸ್ಟ್ರಾರ್ ಇದ್ದವರು, ಯಾವರೀತಿ ಇರಬೇಕು ಎಂಬುದನ್ನು ನೋಡಿಕೊಳ್ಳುತ್ತಾನೆ. ಇದರಲ್ಲಿಯೂ ಸರ್ಕಾರ ಮೂಗು ತೂರಿಸತಕ್ಕ ಕೆಲಸ ಆಗುತ್ತದೆ. ಮತ್ತೆ ಇನ್ನೊಂದು ಬಹಳ ಪ್ರಮುಖವಾದಂಥ ವಿಚಾರ. ಏನೋ ಪ್ರಯತ್ನ ಮಾಡಿದ್ದಾರೆ. ಆದರೆ, ಏಕೋ ಅರ್ಧಕ್ಕೇ ನಿಲ್ಲಿಸಿಬಿಟ್ಟಿದ್ದಾರೆ. ಈ ಇಂಟರ್ ಯೂನಿವರ್ಸಿಟಿ ಟ್ರಾನ್ಸ್‌ಫರ್ of ಎಂಪ್ಲಾಯೀಸ್, ಅದು ಆಗಲೇ ಬೇಕು.

> Transfer of Employees (1): Notwithstanding anything contained in any contract, agreement or in any other law for the time being in force and the conditions of service applicable to the employees of the University, the Chancellor on the recommendation of the State Government may for administrative resons transfer any employee holding any post in the University to any other University established under this Act..."

ಅಂದರೆ, ಒಂದು ಸಾರಿ ಸೇರುತ್ತಾನೆ. ಧಾರವಾಡದ ಒಬ್ಬ ಟೀಚರ್ ಮೈಸೂರು ಯೂನಿವರ್ಸಿಟಿಗೆ ಸೇರುತ್ತಾನೆ. ಅಲ್ಲಿ ಒಂದೆರಡು ವರ್ಷ ಇದ್ದು, ಅಲ್ಲಿ ಏನೋ ಸಮಸ್ಯೆ ಸೃಷ್ಟಿ ಮಾಡಿ ಟ್ರಾನ್ಸ್‌ಫರ್ ತೆಗೆದುಕೊಳ್ಳುತ್ತಾನೆ ಅಥವಾ ನೀವು ಟ್ರಾನ್ಸ್‌ಫರ್ ಮಾಡಿಸುತ್ತೀರಿ. ಅವನು ಧಾರವಾಡಕ್ಕೆ ಹೊರಟುಹೋದ ಮೇಲೆ, ಅಲ್ಲಿ ಖಾಯಂ ಆಗಿ ಇದ್ದುಬಿಡುತ್ತಾನೆ. ಅವನ ಸ್ವಂತ ಊರೂ ಆಯಿತು. ಮತ್ತೆ ಅವನು ಅಲ್ಲಿ ರಾಜಕೀಯ ಮಾಡುತ್ತಾನೆ. ಅದಕ್ಕೆ ನಾನು, ನಮ್ಮ ಹಳೆಯ ಆಕ್ಟ್‌ನಲ್ಲಿ ಏನು ಸಲಹೆ ಮಾಡಿದ್ದೇನೆಂದರೆ, three times in his service it should be mandatory. ಅವನ ಲೀಸ್ ಆ ಯೂನಿವರ್ಸಿಟಿಯೊಳಗಡೆಯೇ ಇರುತ್ತದೆ. ಅವನನ್ನು ಮೂರು ಸಾರಿ ವರ್ಗಾವಣೆ ಮಾಡಬಹುದು. ಅದನ್ನು ನಾವು ಇಟ್ಟಿದ್ದವು, ತಾವು ಏಕೋ ಇದನ್ನು ಬಿಟ್ಟುಬಿಟ್ಟಿದ್ದೀರಿ. ಇಂಟರ್ ಯೂನಿವರ್ಸಿಟಿ ಟ್ರಾನ್ಸ್‌ಫರ್ ಎಂದು ಒಂದು ಸಾರಿ ಮಾಡಿಕೊಂಡು, ಅಲ್ಲಿಯೇ absorb ಆಗಿಬಿಡುತ್ತಾನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಸಚಿವರು) :— ಮೂರು ಸಾರಿ ವರ್ಗಾವಣೆ ಎಂದು ಏಕೆ ನಿರ್ಬಂಧ ಮಾಡುತ್ತೀರಿ. `transfer any employee' ಎಂದು ಜನರಲ್ ಆಗಿ ಹೇಳಿದ್ದೇವೆ.

ಶ್ರೀ ಬಿ. ಸೋಮಶೇಖರ್ :— ಒಂದು ಸಾರಿ ವರ್ಗಾವಣೆ ತೆಗೆದುಕೊಂಡು ಅವನ ಊರಿಗೆ ಹೊರಟುಹೋಗಿ ಅಲ್ಲಿಯೇ absorb ಆಗಿ, ಮುಂದುವರಿಯುತ್ತಾನೆ. He should be liable for transfer at least three times in his career. ಆಗ ಅವನು ಒಂದೇಕಡೆ ಬೇರುಬಿಟ್ಟುಕೊಂಡು, ರಾಜಕೀಯ ಮಾಡುವುದಕ್ಕಾಗುವುದಿಲ್ಲ. ಪ್ರೊಫೆಸರ್ಸ್ ಮತ್ತು ಲೆಕ್ಚರರ್ಸ್ ಮಂತ್ರಿಗಳನ್ನು ಪಬ್ಲಿಕ್ ಆಗಿ ಟೀಕೆ ಮಾಡುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :— ನಾವು ಅದನ್ನು ಜನರಲ್ ಆಗಿ ಬಿಟ್ಟುಬಿಡೋಣ. ಒಂದು ಸಲ ಅಲ್ಲ, ಹತ್ತು ಸಾರಿ ಟ್ರಾನ್ಸ್‌ಫರ್ ಆಗಲಿ.

ಶ್ರೀ ಬಿ. ಸೋಮಶೇಖರ್ :— ನಾನು ಮಿನಿಮಮ್ ಹೇಳಿರುವುದು. ನೀವು ಮೂರು ವರ್ಷಕ್ಕೊಂದು ಸಲ ಮಾಡಿದರೆ ಇನ್ನೂ ಸಂತೋಷ. ಆದರೆ, ನೀವು ಟ್ರಾನ್ಸ್‌ಫರ್ ಎಂದು ಇಟ್ಟಿದ್ದೀರಿ. ಒಂದು ಸಾರಿ ಟ್ರಾನ್ಸ್‌ಫರ್ ತೆಗೆದುಕೊಂಡವನು, ಇನ್ನೊಂದು ಸಾರಿ ಟ್ರಾನ್ಸ್‌ಫರ್ ತೆಗೆದುಕೊಳ್ಳುವುದೇ ಇಲ್ಲ. ಅದಕ್ಕೋಸ್ಕರ ನೀವು ಕಡ್ಡಾಯ ಮಾಡಿ. At least three times in his career; ಎಂದು ಇದೆ. ಬೇಕಾದರೆ ಇನ್ನೂ ಜಾಸ್ತಿ ಮಾಡಿ. ನಿಮ್ಮ ಉದ್ದೇಶ ಮೂರು ವರ್ಷಕ್ಕೊಂದು ಸಾರಿ ಟ್ರಾನ್ಸ್‌ಫರ್ ಮಾಡಬೇಕೆಂದಿರುವಾಗ, ಈ ಕಂಡೀಷನ್ಸ್ ಇಟ್ಟರೆ ಅನುಕೂಲವಾಗುತ್ತದೆ. ಆಮೇಲೆ ಇನ್ನೊಂದು ಇಂಟೇಕ್ ನಿಗದಿ ಮಾಡತಕ್ಕ ಅಧಿಕಾರವನ್ನು ಸರ್ಕಾರಕ್ಕೆ ಇಟ್ಟುಕೊಂಡಿದ್ದೀರಿ.

ಇಂಟೇಕ್ ನಿಗದಿ ಮಾಡತಕ್ಕಂಥದ್ದು ಮೆಡಿಕಲ್ ಕಾಲೇಜ್‌ಗಾಗಲೀ, ಇಂಜಿನಿಯರಿಂಗ್ ಕಾಲೇಜುಗಳಿಗಾಗಲೀ, ಎ.ಐ.ಸಿ.ಟಿ. ಮತ್ತು ಡಿ.ಸಿ.ಇ., ಡೆಂಟರ್ ಕಾಲೇಜುಗಳಿಗೆ, ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾ, ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾ ಇವುಗಳಲ್ಲಿ ಇಂಟೇಕ್ ನಿಗದಿ ಮಾಡುವುದನ್ನು ಸರ್ಕಾರ ಮಾಡುವುದಕ್ಕಾಗುವುದಿಲ್ಲ. ಅದನ್ನು ತಾವು ಹೇಗೆ ಮಾಡುತ್ತೀರೋ ನನಗಂತು ಗೊತ್ತಿಲ್ಲ. ಅದನ್ನು ಹಾಗೆಯೇ ಇಡಬೇಕಾಗುತ್ತದೆ. ಮತ್ತೆ ಈ ಮ್ಯಾನೇಜ್‌ಮೆಂಟ್, ಎಕ್ಸಾಮಿನೇಷನ್ ವರ್ಕ್ ಮ್ಯಾನೇಜ್‌ಮೆಂಟ್. ಬಹಳ ಸಂತೋಷ, ನಾನು ಇದನ್ನು ಎರಡು ವರ್ಷ ಎಂದು ಇಟ್ಟಿದ್ದೆ.

> "If any person who has been allotted the examination work under sub-section (1) is found guilty of breach of duties or involves in any misbehaviour shall on conviction be punished with imprisonment for a period which may extend to two years . . .

ಇದನ್ನು ಮೂರು ವರ್ಷ ಎಂದು ಇಟ್ಟಿದ್ದೀರಿ. ಇದು ಬಹಳ ಒಳ್ಳೆಯ ಸಲಹೆ ಎಂದು ನಾನು ಅಂದುಕೊಂಡಿದ್ದೇನೆ. ಈ ಇಂಟೇಕ್ ವಿಷಯದ ಪ್ರಾವಿಷನ್ ಡಿಫೆಕ್ಟಿವ್ ಆಗುತ್ತದೆ. ಇದನ್ನು ಯಾವರೀತಿ ಬದಲಾವಣೆ ಮಾಡುತ್ತೀರೋ, ಅದನ್ನು ನೋಡಬೇಕಾಗುತ್ತದೆ. ಇಷ್ಟು ಹೇಳಿ ಬೈ ಅಂಡ್ ಲಾರ್ಜ್ ಏನಿಲ್ಲ. ಮೂಲಭೂತವಾಗಿ ಎರಡು ಮೂರು ವಿಚಾರಗಳನ್ನು ತಾವು ಮಾಡಿದರೆ ಬಹುಶಃ ನಾವೂ ಇದಕ್ಕೆ ಬೆಂಬಲ ಕೊಡುತ್ತೇವೆ. ಏಕೆಂದರೆ, ಇದು ನನಗೂ ಆಸಕ್ತಿ ಇತ್ತು, ಆದರೆ ನಾನು ಮಾಡುವುದಕ್ಕಾಗಲಿಲ್ಲ. ನಾನು ಆ ಅವಧಿಯಲ್ಲಿ ಇರಲಿಲ್ಲ. ಆದರೆ, ಇದನ್ನು ತಿರುಗಾ ಮುರುಗಾ ಮಾಡುವುದು ಬೇಡ. ಕೆಲವು ವಿಚಾರಗಳ ಬಗ್ಗೆ ತಿದ್ದುಪಡಿ ತಂದು, ಮಾಡಿದರೆ ಬಹುಶಃ ನಾನು ಇದನ್ನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ವೈಸ್ ಚಾನ್ಸಲರನ್ನು ನೇಮಕ ಮಾಡತಕ್ಕಂತಾದ್ದು, ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಇದು ಸ್ವಾಯುತ್ತತೆಗೆ ಧಕ್ಕೆ ಬರತಕ್ಕ ವಿಚಾರ. ಇದರ ಬಗ್ಗೆ ನನ್ನ ಸ್ಪಷ್ಟವಾದಂಥ ಅಭಿಪ್ರಾಯವನ್ನು ಕೊಟ್ಟಿದ್ದೇನೆ. ಅದನ್ನು ತಾವು ತಿದ್ದಿಕೊಳ್ಳುತ್ತೀರಿ ಎಂದು ನನಗನಿಸುತ್ತದೆ. ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಜುಗೌಡ(ಹನೂರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಸದನದ ಮುಂದೆ ಮಂಡಿಸಿರತಕ್ಕಂಥ, ಕರ್ನಾಟಕ ರಾಜ್ಯದ 1977ರ ಅಧ್ಯಾಯಕ್ಕೆ ತಂದಿರತಕ್ಕ ಸಮಗ್ರವಾದ ತಿದ್ದುಪಡಿ ಸಮಯೋಚಿತವಾಗಿದೆ. ಹಾಗೂ ಶ್ಲಾಘನೀಯವಾಗಿದೆ. ವಿಶ್ವವಿದ್ಯಾನಿಲಯದ ಎಲ್ಲಾ ರೀತಿಯ ಗುಣಮಟ್ಟವನ್ನು ಕಾಪಾಡಲು ತಂದಿರತಕ್ಕಂಥ ತಿದ್ದುಪಡಿ ತುಂಬಾ ಸಕಾಲಿಕವಾಗಿದೆಯೆಂದು ನನ್ನ ಅಭಿಪ್ರಾಯ. ಸೆನೆಟ್ ಮಾಡತಕ್ಕಂತಾದ್ದು, ಯಾವುದೇ ಹಂತದಲ್ಲಿ ಯಾವುದೇ ರಾಜಕೀಯ ಪ್ರವೇಶ ಮಾಡಬಾರದು, ಇವೆಲ್ಲವೂ ಕೂಡ..

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೇ, ಇವತ್ತು ಬಿಲ್ಲುಗಳ ಬಗ್ಗೆ ಚರ್ಚೆ ನಡೆದಿದೆ. ಮೊನ್ನೆ ಬಿ.ಎ.ಸಿ. ಮೀಟಿಂಗ್ ಆದಂಥ ಸಂದರ್ಭದಲ್ಲಿ ನಮಗೆ ಇವತ್ತಿಗೆ ಸೆಷನ್ ಮುಗಿಯುತ್ತದೆಂದು ಹೇಳಿದ್ದರು. ಆದರೆ, ಇವತ್ತು ರೂಲಿಂಗ್ ಪಾರ್ಟಿ ಕಡೆಯಿಂದ ಏನು ಸುದ್ದಿ ಬರುತ್ತಾ ಇದೆಯೆಂದರೆ, ನಾಳೆಯೂ ಅಧಿವೇಶನ ಇದೆಯೆಂದು ಕೇಳಿ ಬರುತ್ತಿದೆ. ಇದರ ಬಗ್ಗೆ ನಮ್ಮನ್ನು ಕನ್ಸಲ್ಟ್ ಮಾಡಿಲ್ಲ, ಬಿ.ಎ.ಸಿ. ಮೀಟಿಂಗ್ ಕರೆದಿಲ್ಲ. ಇವತ್ತಿನವರೆಗೂ ನಮಗೆ ಲಾ ಮಿನಿಸ್ಟರ್ ಆಗಲೀ, ಅಥವಾ ಸ್ಪೀಕರ್ ಆಗಲೀ ಕರೆದಿಲ್ಲ. ಇದೇನೆಂದು ನಮಗೆ ಅರ್ಥವಾಗುತ್ತಾ ಇಲ್ಲ. ಇದರ ಬಗ್ಗೆ ಮಾನ್ಯ ಅಧ್ಯಕ್ಷರು ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಇವತ್ತು ಕೊನೇ ದಿವಸ ಎಂದು ಎಷ್ಟೋ ಶಾಸಕರು ಈಗಾಗಲೇ ತಮ್ಮ ತಮ್ಮ ಊರುಗಳಿಗೆ ಹೋಗುವುದಕ್ಕೆ ರಿಸರ್ವೇಷನ್ ಮಾಡಿಸಿಕೊಂಡಿದ್ದಾರೆ. ಮತ್ತು ಈಗಾಗಲೇ ಎಷ್ಟೋ ಜನ ಹೋಗಿದ್ದಾರೆ. ಹೀಗಾಗಿ, ಇವತ್ತು ನಮ್ಮನ್ನು ಕತ್ತಲಲ್ಲಿ, ಇಟ್ಟು, ವಿರೋಧ ಪಕ್ಷಗಳ ನಾಯಕರಲ್ಲಿ ಯಾರನ್ನೂ ಕನ್ಸಲ್ಟ್ ಮಾಡದೇ, ಇವರು ನಾಳೆಗೆ ಅಧಿವೇಶನ ಮುಗಿಸುತ್ತಾರೆಂದರೆ ಏನು ವ್ಯವಸ್ಥೆ ನಡೆದಿದೆಯೆಂದು ಗೊತ್ತಾಗುತ್ತಾ ಇಲ್ಲ. ಏಕೆ ಹೀಗೆ ನಡೆಯುತ್ತಿದೆಯೆಂದು ನಮಗೆ ಗೊತ್ತಾಗುತ್ತಿಲ್ಲ. ಅದಕ್ಕೆ ಇವತ್ತು ಮುಗಿಸುವುದಾದರೆ ಮುಗಿಸಿಬಿಡಲಿ. ನಾವು ಮೊನ್ನೆ ಬಿ.ಎ.ಸಿ. ಮೀಟಿಂಗ್‌ನಲ್ಲೂ ಹೇಳಿದ್ದೇವೆ. ಇನ್ನೂ ಎರಡು ದಿವಸ ಅಲ್ಲ, ಬೇಕಾದರೆ ಒಂದು ವಾರ ಮುಂದೆ ಹಾಕಲಿ. ನಿರ್ದಿಷ್ಟವಾದ ಅವಧಿಯನ್ನು ನಿಗದಿಮಾಡಲಿ. ಅದನ್ನು ಬಿಟ್ಟು ಕೊನೆಯ ಹಂತದಲ್ಲಿ ನಾಳೆಗೆ ಸಭೆಯನ್ನು ಮುಂದೂಡುತ್ತೇವೆಂದರೆ ನಾಳೆ ನಾವು ಶಾಸಕರುಗಳನ್ನು ಎಲ್ಲಿಂದ ಕರೆಯಿಸಿಕೊಂಡು ಬರಬೇಕು? ಇನ್ನೂ ಮೂರ್ನಾಲ್ಕು ಬಿಲ್ಲುಗಳು ಇದೆ, ನಾವುಗಳು ಚರ್ಚೆಯಲ್ಲಿ ಭಾಗವಹಿಸುವುದು ಬೇಡವೆ? ನಾಳೆ ಎಷ್ಟೋ ಜನ ಶಾಸಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳನ್ನು ನಿಗದಿ ಮಾಡಿಕೊಂಡಿದ್ದಾರೆ. ಈಗಾಗಲೇ ಅವರು ಹೋಗಲು ತಯಾರಿ ಮಾಡುತ್ತಿದ್ದಾರೆ. ಆದ್ದರಿಂದ ಸಭೆಯನ್ನು ನಾಳೆಗೂ ಮುಂದೂಡುವ ಬಗ್ಗೆ ಸ್ಪಷ್ಟಪಡಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಛೇರ್ಮನ್ :— ಮೊನ್ನೆ ನಡೆದಂಥ ಬಿ.ಎಸ್.ಸಿ. ಸಭೆಯಲ್ಲಿ ಕೊನೆಯ ಪಕ್ಷ ಮುಖ್ಯವಾದ ನಾಲ್ಕು ಬಿಲ್ಲುಗಳನ್ನು ಪಾಸುಮಾಡಿಕೊಡಬೇಕೆಂದು ಒಪ್ಪಂದವಾಗಿದೆ. ಅದರಂತೆ ನಡೆಯಬೇಕಲ್ಲ. ಒಟ್ಟಾರೆ ನಾಲ್ಕು ಬಿಲ್ಲುಗಳಲ್ಲ, ಪ್ರಮುಖವಾದ ನಾಲ್ಕು ಬಿಲ್ಲುಗಳು.

ಶ್ರೀ ಜಗದೀಶ ಶೆಟ್ಟರ್ :— ಅರ್ಡಿನೆನ್ಸ್ ರೀಪ್ಲೇಸ್‌ಮೆಂಟ್ ಯಾವುದನ್ನು ಮಾಡಿದ್ದರು ಅದು, ವಿಶ್ವವಿದ್ಯಾನಿಲಯದ ಬಿಲ್ಲು ಮತ್ತು ಗ್ರಾಮೀಣ ಕೃಷಿಯಂತದ ಬಿಲ್ಲು ಈ ನಾಲ್ಕು ಬಿಲ್ಲುಗಳನ್ನು ಪ್ರಾಶಸ್ತ್ಯದ ಮೇಲೆ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿತ್ತು. 24ರ ಒಳಗಾಗಿ ಇವುಗಳನ್ನು ಪಾಸ್ ಮಾಡಿಕೊಡುವುದಾಗಿ ನಾವೂ ಭರವಸೆ ನೀಡಿದ್ದೆವು. ಆದರೆ ತಾವು ಇವತ್ತು ಅದನ್ನು ಬಿಟ್ಟು ಮತ್ತೆ ನಾಲ್ಕೈದು ಬಿಲ್ಲುಗಳನ್ನು ತಂದು ಸಭೆಯನ್ನು ನಾಳೆಗೆ ಮುಂದೂಡುವ ಪರಿಸ್ಥಿತಿಯಾಗಿದೆ. ನಮಗೆ ಇದರ ಬಗ್ಗೆ ಸ್ಪಷ್ಟಪಡಿಸಬೇಕು.

ಶ್ರೀ ಎ. ರಾಮದಾಸ್:— ಮಾನ್ಯ ಛೇರ್ಮನ್‌ರವರೆ, ನಿನ್ನೆ ಮಾನ್ಯ ಕಾನೂನು ಸಚಿವರು ಇರತಕ್ಕ ಸಂದರ್ಭದಲ್ಲಿ ಒಂದು ಪ್ರಮುಖವಾದ ವಿಚಾರ ಚರ್ಚೆಯಾಗಿತ್ತು ಮತ್ತು ಅನಂತರ ಅಧ್ಯಕ್ಷರು ಸಹ ಒಂದು ರೂಲಿಂಗ್‌ನ್ನು ಕೊಟ್ಟಿದ್ದರು. ಯಾವುದೇ ಬಿಲ್ಲಿನ ಬಗ್ಗೆ ಕೆಳಮನೆಯಲ್ಲಿ, ಕೊಡಬೇಕಾದ ಪ್ರಾಶಸ್ತ್ಯದ ಬಗ್ಗೆ ಮಾತನಾಡಿದರು. ಈಗ ಮತ್ತೆ ನಾಳೆಗೆ ಸದನವನ್ನು ಮುಂದೂಡಿ ಮೇಲ್ಮನೆಯಲ್ಲಿ ಅಂಗೀಕೃತವಾಗಿರುವ ಹೆಚ್.ಆರ್.ಸಿ. ಬಿಲ್ಲನ್ನು ಇಲ್ಲಿ, ಚರ್ಚೆಗೆ ತೆಗೆದುಕೊಂಡು ನಾಳೆ ತರಾತುರಿಯಲ್ಲಿ, ತರುವುದರಿಂದ ನಾವು ಅದರ ಬಗ್ಗೆ ಏನು ಎಂಬುದೇ ಗೊತ್ತಿಲ್ಲದಿರುವಾಗ, ಅದರ ಬಗ್ಗೆ ನಮ್ಮ ವಿಚಾರಧಾರೆಯನ್ನು ಹರಿಸಲು ಅವಕಾಶ ಮಾಡಿಕೊಡದೆ ಇರುವುದು ಸರಿಯಲ್ಲ. ನಾಳೆ ನಮ್ಮದೇ ಅದಂಥ ಕಾರ್ಯಕ್ರಮಗಳು ಇದೆ.

(ಈ ಹಂತದಲ್ಲಿ ಪೀಠವನ್ನು ಅಲಂಕರಿಸಿದರು)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು):— ಮಾನ್ಯ ಅಧ್ಯಕ್ಷರೆ, ಮೇಲ್ಮನೆ ಮತ್ತು ಕೆಳಮನೆಯ ಪ್ರಾಶಸ್ತ್ಯದ ಬಗ್ಗೆ ಮತ್ತೆ ಮತ್ತೆ ಚರ್ಚೆ ಮಾಡುವುದು ಬೇಡ. ಮಾನ್ಯ ರಾಮದಾಸ್‌ರವರು ಮೇಲ್ಮನೆಯಲ್ಲಿ ಹೆಚ್.ಆರ್.ಸಿ. ಆಕ್ಟ್ ಮಂಡಿಸಿರುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಆ ಮನೆಯಲ್ಲಿ, ಮಂಡಿಸಿದ್ದು ನಿನ್ನೆ ಮೊನ್ನೆಯಲ್ಲ. ಅದು ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಹೋಗಿ. the Joint Select Committee has looked into it in detail ಅದು ಹಾಗೆ ಆಗಿದೆ. ಧಾರ್ಮಿಕ ದತ್ತಿ ಆಕ್ಟ್ ಮತ್ತೊಂದು. ಇಡೀ ಭಾರತದಲ್ಲಿ ಇದು ಒಂದು ವಿಶೇಷವಾದ ಆಕ್ಟ್ ಆಗಿದೆಯೆಂದು ನನ್ನ ಭಾವನೆ. ಅದೊಂದು ಆದರ್ಶವಾದ ಮಸೂದೆಯನ್ನು ತಂದಿದ್ದೇವೆ. ಅದೂ ಸಹ ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಹೋಗಿ ಬಂದಿರತಕ್ಕದ್ದು. ಎಲ್ಲವನ್ನು ಕೆಳಮನೆಯಲ್ಲೇ ಮೊದಲು ಪಾಸ್ ಮಾಡಬೇಕೆಂದು ತಾವು ಹೇಳುವುದಾದರೆ ಆ ಸದನ ಏಕೆ ಬೇಕು? They have every right to get the bill introduced in any House, other than the money bill. ಇದು ಒಂದು. ಅವ್ಯಗಳು ಈಗ ಅಲ್ಲಿ ಪಾಸಾಗಿ ಟ್ರಾನ್ಸ್‌ಮಿಷನ್‌ನಲ್ಲಿ ಬಂದಿವೆ. ಬಿ.ಎ.ಸಿ.ನಲ್ಲಿ ತಮ್ಮ ಅಪೇಕ್ಷೆಯ ಮೇರೆಗೇ ಸದನವನ್ನು ಎರಡು ಮೂರು ಸಲ ಮುಂದಕ್ಕೆ ಹಾಕಿದ್ದೇವೆ. ನಮ್ಮ ಅಪೇಕ್ಷೆಯ ಮೇರೆಗಲ್ಲ. ನಮ್ಮ ಶಾಸನದಲ್ಲಿ ಏನಿದೆಯೆಂದರೆ..

ಶ್ರೀ ಎಸ್.ಎಸ್. ಪಾಟೀಲ್:— ಇದೇ ರೀತಿ ಅನಾವಶ್ಯಕವಾದ ಚರ್ಚೆಗಳಾಗಿ ನಮಗೆ ಮಾತನಾಡಲು ಅವಕಾಶವೇ ಸಿಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ:— ಕಾನೂನು ಸಚಿವರಾದ ನನಗೇ ಮಾತನಾಡಲು ಅವಕಾಶ ಕೊಡದಿದ್ದರೆ ಹೇಗೆ? ನಾನು ತುಲ್ಡ್ ಆಗಿಲ್ಲ. The sitting of the House

is duly constituted. The House shall sit on such days as the Speaker, having regard to the state of the business of the House, may from time to time direct. This is sec.13. Section 14 says:

> "Sitting of the House shall subject to the direction of the Speaker, ordinarily commence at eleven hours. Unless the Speaker otherwise directs, the sitting of the House on any day shall ordinarily conclude at 17.00 hours"

Mr. Speaker, Sir, you are well within your powers to take a decision, if the business of the House is not concluded. If the business is concluded then you need not...

ಶ್ರೀ ಜಗದೀಶ್ ಶೆಟ್ಟರ್ :— ತಾವು 17ರಂದು ಸದನವನ್ನು ಮುಂದೂಡಿದಿರಿ, ಹಾಗಿದ್ದರೆ ನಮ್ಮನ್ನು ಏಕೆ ಕರೆಯಬೇಕಾಗಿತ್ತು, ಮತ್ತೆ 22ರಂದು ಸದನವನ್ನು ಮುಂದೂಡಿರಿ ಆಗ ಏಕೆ ನಮ್ಮನ್ನು ಕರೆಯಬೇಕಾಗಿತ್ತು? ತಮಗೆ ಅಧಿಕಾರವಿದ್ದರೆ ಹಾಗೆಯೇ ಮಾಡಿ.

ಶ್ರೀ ಡಿ.ಬಿ.ಚಂದ್ರೇಗೌಡ :— ಈಗ ಸದನವನ್ನು ಮುಂದಕ್ಕೆ ಹಾಕಿದ್ದೇವೆಯೇ?

SRI S. Suresh Kumar :— It is called 'preparing the ground'.

Mr. Speaker :— No decision has been taken so far. ನಾಳೆಗೆ ಸದನ ಮುಂದವರೆಯಬೇಕೆಂದು ತೀರ್ಮಾನವನ್ನೇ ಮಾಡಿಲ್ಲವಲ್ಲ. ಆದರ ಬಗ್ಗೆ ಏಕೆ ಸಂಶಯ ಪಡುತ್ತೀರಿ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ಕಾಂಗ್ರೆಸ್ ಶಾಸಕರಿಗೆ ನಾಳೆ ಹೆಡ್ ಕ್ವಾರ್ಟರ್ಸ್‌ನಲ್ಲಿ ಇರಬೇಕೆಂದು ವಿಪ್‌ನ್ನು ಇಶ್ಯೂ ಮಾಡಿದ್ದಾರೆ..

ಅಧ್ಯಕ್ಷರು :— ಅದು ನನಗೆ ಗೊತ್ತಿಲ್ಲ. ಅದು ಪಕ್ಷದ ವಿಚಾರ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ (ಮಾನ್ಯ ಸಾರಿಗೆ ಸಚಿವರು) :— ನಮ್ಮ ಕಾಂಗ್ರೆಸ್ ಸದಸ್ಯರಿಗೆ ವಿಪ್ ಬಂದಿರುವ ಬಗ್ಗೆ ಇವರಿಗೆ ಹೇಗೆ ಗೊತ್ತು? ನಮಗೆ ಯಾವುದೇ ರೀತಿಯ ವಿಪ್ ಬಂದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :— ನಾಳೆ ಸದನವನ್ನು ಮುಂದಕ್ಕೆ ಹಾಕುವ ಬಗ್ಗೆ ವಿಚಾರವಿಲ್ಲವೆಂದು ಹೇಳಿದರೆ ಸಾಕು. ಅದರ ಬಗ್ಗೆ ಮಾತ್ರ ನಾವು ಸ್ಪಷ್ಟೀಕರಣ ಕೇಳಿದರೆ ಇವರು ನಿಯಮದ ಬಗ್ಗೆ ಹೇಳುತ್ತಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :— ತಾವು ಒಪ್ಪಿಕೊಂಡಿದ್ದರೆ ಮುಂದಕ್ಕೆ ಹಾಕುತ್ತೇವೆಂದು ಹೇಳುತ್ತಿದ್ದೆ.

ಶ್ರೀ ಜಗದೀಶ್ ಶೆಟ್ಟರ್ :— ಇವತ್ತು ರಾತ್ರಿ ಒಂಭತ್ತರವರೆಗೆ ಸಭೆಯನ್ನು ನಡೆಸಿ ನಾಳೆಗೆ ಮುಂದಕ್ಕೆ ಹಾಕೋಣವೋ, ಬೇಡವೋ ಎಂದು ಕೇಳುತ್ತೀರೇನು?

ಶ್ರೀ ಡಿ.ಬಿ. ಚಂದ್ರೇಗೌಡ :— ತಾವು ಇಷ್ಟು ದಿವಸ ಸಹಕರಿಸಿದ್ದೀರಿ, ಇನ್ನು ಒಂದು ದಿವಸದಲ್ಲಿ ಏನಾಗುತ್ತದೆ? ಮೂರು ದಿನ ಸಭೆ ಬೆಳಿ ನಡೆಯುತ್ತಿಲ್ಲವೆಂದು ಒಂದು ಸಲ ಕೇಳುತ್ತೀರಿ, ಸದನ ನಡೆಸೋಣ ಎಂದರೆ ಹೀಗೆ ಹೇಳುತ್ತೀರಿ, ಇದು ಹೇಗೆ?

ಶ್ರೀ ಬಿ.ಎನ್. ಬಚ್ಚೇಗೌಡ :— ತಾವು ಐದಾರು ಬಿಲ್ಲುಗಳನ್ನು ಒಂದೇ ದಿನದಲ್ಲಿ ತಂದು ಇವೆಲ್ಲವನ್ನು ಮುಗಿಸಬೇಕೆಂದರೆ ನಮಗೆ ಹೇಗೆ ಗೊತ್ತಿರುತ್ತದೆ ಐದಾರು ಬಿಲ್ಲುಗಳು ಇದೆಯೆಂದು?

ಶ್ರೀ ಡಿ.ಬಿ. ಚಂದ್ರೇಗೌಡ :— ತಾವು ಸರ್ಕಾರವನ್ನು ನಡೆಸಿದ್ದವರು. ತಮ್ಮಿಂದ ಈ ಮಾತನ್ನು ಕೇಳಲು ನಾನು ತಯಾರಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :— ಮಾನ್ಯ ಅಧ್ಯಕ್ಷರೆ, ಒಂದು ದಿವಸ ಮುಂದೂಡುವ ಪ್ರಶ್ನೆಯಲ್ಲ. ಬೇಕಾದರೆ ಇನ್ನೂ ಒಂದು ವಾರ ಸದನ ಮುಂದೂಡಿ, ನಾವು ಬಂದು ಚರ್ಚೆ ಮಾಡಲು ಸಿದ್ಧರಿದ್ದೇವೆ. ನೂರು ದಿವಸ ಸದನ ನಡೆಸುತ್ತೇವೆಂದು ಹೇಳಿಕೆ ಕೊಡುವುದು ಆದರೆ ಎಲ್ಲಿ ಮಾಡಿದ್ದೀರಿ?

ಅಧ್ಯಕ್ಷರು :— ಸಾಮಾನ್ಯವಾಗಿ ನಮ್ಮ ನಿಯಮಗಳೇನಿದೆ ಅದರಂತೆ ಮೊದಲಿನಿಂದಲೂ ನಡೆದುಕೊಂಡು ಬಂದಿರುತ್ತಿದ್ದೇವೆ. ಆದೆ ನಾವು ಬಿ.ಎಸ್.ಪಿ.ಯಲ್ಲಿ ಏನು ತೀರ್ಮಾನ ಮಾಡಿರುತ್ತೇವೋ ಅದರಂತೆ ಯಾವತ್ತೂ ನಡೆದುಕೊಂಡಿಲ್ಲ. ಈ ಬಿಲ್ಲಿಗೆ ಎರಡು ಗಂಟೆ ಎಂದು ನಿಗದಿ ಮಾಡಲಾಗಿತ್ತು, ಆದರೆ ತಾವು ಐದು ಗಂಟೆ ತೆಗೆದುಕೊಂಡುದ್ದೀರಿ. ಹಾಗೆ ಸ್ವಲ್ಪ ಹೆಚ್ಚು ಕಮ್ಮಿಯಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಅನಕಪುರ) :— ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರುವುದನ್ನು ಮಾನ್ಯ ಕಾನೂನು ಸಚಿವರು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ವಿಪ್ ಕೊಡುವುದು ಕೊಡದೇ ಇರುವುದು ಅದು ಅವರ ಪಕ್ಷದ ವಿಚಾರ. ಅದಕ್ಕೂ ನಮಗೂ ಸಂಬಂಧವಿಲ್ಲ. ಇವೊತ್ತು ಸದನದ ಕಾರ್ಯಕಲಾಪಗಳು ಮುಗಿಯುತ್ತವೆ ಎಂದು ಬಹುತೇಕ ವಿರೋಧಪಕ್ಷದ ಸದಸ್ಯರೆಲ್ಲರೂ ಅಂದುಕೊಂಡಿದ್ದರು. ಮಾನ್ಯ ಹನುಮೇಗೌಡರಿಗೆ ಅವರ ಕ್ಷೇತ್ರದಲ್ಲಿ ಕಾರ್ಯಕ್ರಮವಿದೆ, ಮಾನ್ಯ ಎಸ್.ಎಸ್. ಪಾಟೀಲರವರು ನಾಳೆ ದೆಹಲಿಗೆ ಹೋಗುವ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಇನ್ನೂ ನಾಲ್ಕೈದು ಬಿಲ್ಲುಗಳು ಚರ್ಚೆಗೆ ಬರುತ್ತವೆ. ಮಾನ್ಯ ಮುಖ್ಯಮಂತ್ರಿಯವರು ಇವುಗಳನ್ನು ಮುಗಿಸಬೇಕೆಂದು ಹೇಳಿದ್ದಾರೆ. ಇನ್ನೊಂದು ಖಾಸಗಿ ಸ್ಕೂಲಿನ ಬಿಲ್ ಕೂಡ ಇದೆ. ಅದರ ಟೈಮ್‌ಟೇಬಲ್‌ನ ಬಗ್ಗೆ ಅವರಿಗೂ ನನಗೂ ಗೊತ್ತಿದೆ. ಆದ್ದರಿಂದ ವಿರೋಧ ಪಕ್ಷದ ನಾಯಕರನ್ನು ನಾವುಗಳು ಕನ್ಸಿಲ್ಟ್ ಮಾಡದೇ ಈ ರೀತಿಯಾದ ಡಿಸಿಶನ್‌ಗಳನ್ನು ತೆಗೆದುಕೊಂಡರೆ ಹೇಗೆ?

ಅಧ್ಯಕ್ಷರು :— ಅವರನ್ನು ಹೊರತುಪಡಿಸಿ ನಾವು ಯಾವುದೇ ಡಿಸಿಶನ್‌ನ್ನು ತೆಗೆದುಕೊಂಡಿಲ್ಲ. ಯಾವುದೇ ತೀರ್ಮಾನವನ್ನು ಸಂಬಂಧಪಟ್ಟವರೊಂದಿಗೆ ಚರ್ಚಿಸಿದ ನಂತರ ಅಧ್ಯಕ್ಷನಾಗಿ ನಾನು ಇಲ್ಲಿ ಹೇಳಿದರೆ ಮಾತ್ರ ಅದು ಅಧಿಕೃತ ಎಂದು ಆಗುತ್ತದೆಯಲ್ಲವೆ? ಅದುದರಿಂದ ನಾವುಗಳು ಹೇಗೂ ಇಲ್ಲಿ ಯಾರೂ ಹೇಳಿಲ್ಲ.

ಶ್ರೀ ಡಿ.ವಿ. ಸದಾನಂದ ಗೌಡ (ಪುತ್ತೂರು) :— ಮಾನ್ಯ ಅಧ್ಯಕ್ಷರೇ ಇಲ್ಲಿ ಇನ್ನೂ ನಾಲ್ಕು ಪ್ರಮುಖ ಬಿಲ್‌ಗಳಿವೆ. ನಮ್ಮ ಮುಂದೆ ಇದೆ. ಇಲ್ಲಿ ಆ ಬಗ್ಗೆ ಚರ್ಚೆಯಾದ ನಂತರ ಮೇಲ್ಮನೆಗೆ ಹೋಗಿ ಬರಬೇಕೆಂಬ ಸಂಗತಿಗಳು ಇವೆ. ನೀವು ಸದನವನ್ನು ಇಂತಿಷ್ಟು ದಿನಗಳ ವರೆಗೆ ನಡೆಸುವುದು ಮುಂತಾದ ವಿಚಾರಗಳನ್ನು ಸಂಬಂಧಪಟ್ಟವರೊಂದಿಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಬೇಕೆಂಬುದು ಸಂಪ್ರದಾಯವಲ್ಲವೆ ಎಂಬುದು ಅವರ ವಾದ. ಇವೊತ್ತು ಶುಕ್ರವಾರವಾದ ಕಾರಣ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಬೇರೆ ಬೇರೆ ಕಾರ್ಯಕ್ರಮಗಳು ಇರುತ್ತವೆ. ಅದಕ್ಕಾಗಿ ನಾವುಗಳು ಊರಿಗೆ ಹೋಗಬೇಕಾಗುತ್ತದೆ. ಹೀಗಿರುವಾಗ ನಾಳೆ ಮತ್ತೆ ಸದನ ಮುಂದುವರಿಯುತ್ತದೆ ಎಂಬ ಭಾವನೆಗಳು ಇರುವುದರಿಂದ ಸ್ವಲ್ಪ ವ್ಯತ್ಯಾಸವಾಗುತ್ತಿದೆ ಎಂದು ನಾನು ಹೇಳಬಯಸುತ್ತೇನೆ.

ಅಧ್ಯಕ್ಷರು :— ಮೊದಲಿನಿಂದಲೂ ಬಿಎಸಿ ಮೀಟಿಂಗ್‌ನಲ್ಲಿ ನಾವು ಮಾಡಿದ ತೀರ್ಮಾನಗಳಲ್ಲಿ ೫೦:೫೦ರಷ್ಟು ಮಾತ್ರ ನಡೆಯುತ್ತಿರುವುದು ಎಂಬುದು ನನಗೆ ಗೊತ್ತಿರುವ ಅಂಶ. ಹಾಗೆ ಯಾವಾಗಲೂ ಕರೆಕ್ಟ್ ಆಗಿ ನಡೆದುದೇ ಇಲ್ಲ. ಹಾಗೆಯೇ ಕೊನೆಯ ದಿವಸ ಪ್ರತಿಯೊಂದು ಸಾರಿಯೂ ಒಂದು ದಿನ ಹೆಚ್ಚಾಗಿಯಾಗಿ ಮುಂದುವರಿಯುತ್ತದೆ.

ಆದ್ದರಿಂದ ಮಾನ್ಯ ಚಂದ್ರೇಗೌಡರು ನಾಲ್ಕೈದು ಬಿಲ್‌ಗಳು ಇರುವುದರಿಂದ ಏನು ಮಾಡುವುದು ಎಂದು ಹೇಳಿದ್ದಾರೆಯೇ ಹೊರತು ನಾವೇನೂ ಆ ಬಗ್ಗೆ ಹೇಳಲಿಲ್ಲ. ಇದನ್ನು ಜನರಲ್ ಆಗಿ ಮಾತನಾಡಿದ್ದೇವೆಯೇ ಹೊರತು ಪೋಸ್ಟ್‌ಪೋನ್ ಮಾಡಬೇಕೆಂದು ಹೇಳಿಲ್ಲ. ಮಾನ್ಯ ಚಂದ್ರೇಗೌಡರು ನಿನ್ನೆ ಎರಡೂ ಕ್ಷಿಗಳು ತಪ್ಪಿದಾಗ ಮಾತ್ರ ಚಪ್ಪಾಳೆಯಾಗುವುದು ಎಂದು ಹೇಳಿದ್ದಾರೆ. ಹಾಗೆಯೇ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷವು ಸೇರಿ ನಡೆದರೆ ಚೆನ್ನಾಗಿ ಅನ್ಯೋನ್ಯವಾಗಿ ಇಷ್ಟು ದಿನಗಳನ್ನು ನಿರ್ವಹಿಸಿಕೊಂಡು ಹೋಗಿದ್ದೇವೆ. ಈಗಲೂ ಸಹ ಅನ್ಯೋನ್ಯವಾಗಿ ಹೋಗಿ. ಅದರಲ್ಲಿ ತಪ್ಪೇನಿದೆ? ಈಗ ಇಲ್ಲಿ ಚರ್ಚೆಯು ಮುಂದುವರಿಯುತ್ತಿರಲಿ. ನಾನು, ವಿರೋಧಪಕ್ಷದ ನಾಯಕರು, ಚಂದ್ರೇಗೌಡರು ಮತ್ತಿತರರು ಸಭೆ ಸೇರಿ ಈ ಕುರಿತು ಚರ್ಚಿಸಿಕೊಂಡು ಬರೋಣ. ಅಂತೆಯೇ ಇನ್ನೊಂದು ವಿಚಾರ. ನಾವು ನಿನ್ನೆ ಈ ಮನೆಯಲ್ಲಿ ಏನ ಎಮಾತನಾಡಿದ್ದೇವೆಯೋ ಅಂದರೆ ಆ ಮನೆಯಲ್ಲಿ ಬಿಲ್‌ನ್ನು ಏತಕ್ಕಾಗಿ ಇಂಟ್ರಡ್ಯೂಸ್ ಮಾಡಬಾರದಾಗಿತ್ತು ಎಂಬ ಪ್ರಶ್ನೆಯ ವಿಚಾರದಲ್ಲಿ, ಆ ವಿಷಯವು ಮೇಲ್ಮನೆಯಲ್ಲಿ ಇವೊತ್ತು ಪ್ರಸ್ತಾಪವಾಗಿದೆ. ಆದ್ದರಿಂದ ಆ ವಿಷಯವನ್ನು ಅಲ್ಲಿಗೇ ಬಿಡೋಣ. ಮೇಲ್ಮನೆಯವರು ಮತ್ತು ಕೆಳಮನೆಯವರು ಅಣ್ಣತಮ್ಮಂದಿರ ಹಾಗೆ ಇರಬೇಕೆ ಹೊರತು ನಾವು ನಾವು ಜಗಳವಾಡಿದರೆ ಆಗುತ್ತದೆಯೇ? ಕೋರ್ಟ್‌ನವರು ನಾವು ಜಗಳವಾಡಿದರೆ ಆಗುತ್ತದೆಯೇ? ಅವರಿಗೆ ಇರುವ ಪವರ್ಸ್ ಅವರಿಗಿದೆ, ನಮಗಿರುವ ಪವರ್ಸ್ ನಮಗಿದೆ. ಏನೋ ಒಂದು ಸಂದರ್ಭದಲ್ಲಿ ಸದಸ್ಯರು ವಿಷಯವನ್ನು ಎತ್ತಿರಬಹುದು. ಅವರಿಗಿರುವ ಗೌರವ ಅವರಿಗಿರುತ್ತದೆ ನಮಗಿರುವ ಗೌರವ ನಮಗಿರುತ್ತದೆ. ಅದನ್ನು ಹೆಚ್ಚಾಗಿ ಇನ್ನು ಮುಂದುವರಿಸಿಕೊಂಡು ಹೋಗುವುದು ನಮಗೆ ಬೇಕಾಗಿಲ್ಲ. ಇದನ್ನು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಮೇಲ್ಮನೆಯ ಬಗ್ಗೆ ನಮಗೆಲ್ಲರಿಗೂ ಅಪಾರವಾದ ಗೌರವವಿದೆ. ಈ ಸದನದಲ್ಲಿ ಮೆಜಾರಿಟಿ ಇದೆ ಎಂದು ತಿಳಿದುಕೊಂಡು ಇಲ್ಲಿ ಹೂಂ ಅನ್ನುವುದಿಲ್ಲ, ಆದರೆ ವಿಧೇಯಕವನ್ನು ಪಾಸ್ ಮಾಡಿಕೊಂಡು ಅಲ್ಲಿ ಹೋಗಿ ಹೂಂ ಅನ್ನುತ್ತಾರೆ. ಇದು ಆಗಬಾರದು. ತಾವುಗಳು ಇಲ್ಲಿಯೇ ಹೂಂ ಎಂದು ಹೇಳಿ ಮೇಲ್ಮನೆಯಲ್ಲಿ ಹೋಗಿ ಏಕೆ ಹೂಂ ಎಂದು ಹೇಳುತ್ತೀರಿ. ತಾವು ಹೀಗೆ ಮಾಡುವುದರ ಮೂಲಕ ಈ ಸದನದ ಗೌರವ ಕಳೆಯಬಾರದು ಎಂಬ ಮನವಿ ನಮ್ಮದ್ದು.

ಅಧ್ಯಕ್ಷರು :— ನಮ್ಮ ರಾಜ್ಯಾಂಗದ ಪ್ರಕಾರ ಮತ್ತು ರೂಲ್ಸ್ ಪ್ರಕಾರ ಅಲ್ಲಿಯೂ ವಿಧೇಯಕವನ್ನು ಇಂಟ್ರಡ್ಯೂಸ್ ಮಾಡಬಹುದು. ಆದ್ದರಿಂದ ವಿಷಯವನ್ನು ದೊಡ್ಡದು ಮಾಡದೇ ಇಲ್ಲಿಗೆ ಮುಗಿಸಿಬಿಡೋಣ.

+ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) :— ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಉನ್ನತ ಶಿಕ್ಷಣ ಸಚಿವರು ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಮಂಡಿಸಿದ್ದಾರೆ. ಈ ವಿಧೇಯಕವನ್ನು ಬಹುತೇಕ ನಾವೆಲ್ಲರೂ ಒಪ್ಪುತ್ತೇವೆಂದು ನಾನು ಭಾವಿಸುತ್ತೇನೆ. ಇದು ಬಹಳ ಅನುಪಮವಾದ ವಿಧೇಯಕವೆಂದು ಹೇಳಿದರೆ ತಪ್ಪಾಗಲಾರದು. ಈ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ನಮ್ಮ ಪಕ್ಷದ ನಾಯಕರಾದ ಶ್ರೀ ಸೋಮಶೇಖರ್‌ರವರು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸಚಿವರು ಅಧ್ಯಾಯ-೨ ವಿಶ್ವವಿದ್ಯಾನಿಲಯಗಳು-ಎಂದು ಏನಿದೆ, ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ನಿಗಮ ಎಂಬ ವಿಧೇಯಕವನ್ನು ಇಲ್ಲಿ ತಂದಿದ್ದಾರೆ. ಅದರ ಅಡಿಯಲ್ಲಿ ೧೯೭೬ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ ಹಿನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳನ್ನು ಇದರಲ್ಲಿ ಇನ್ನು ಮುಂದೆ, ಉಪಬಂಧಿಸಲಾದಂತೆ ಅವುಗಳ ಪ್ರಾದೇಶಿಕ ಅಧಿಕಾರಗಳ ವ್ಯಾಪ್ತಿಯೊಡನೆ ಈ ಅಧಿನಿಯಗಳ ಅಡಿಯಲ್ಲಿ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳು-ಎಂದು ಹೇಳಿ, ಗುಲ್ಬರ್ಗ, ಧಾರವಾಡ, ಮಂಗಳೂರು, ಬೆಂಗಳೂರು, ಮೈಸೂರು, ಹೀಗೆ ವಿಶ್ವವಿದ್ಯಾನಿಲಯಗಳ ವಿಚಾರದಲ್ಲಿ ಅವುಗಳ ಕೇಂದ್ರ ಸ್ಥಾನ ಹೊಂದಿದ ಪ್ರದೇಶಗಳ ವಿವರಗಳನ್ನು ಕೂಡ ಇಲ್ಲಿ ಕೊಟ್ಟಿದ್ದಾರೆ. ಇಲ್ಲಿ ಮುಕ್ತ ವಿಶ್ವವಿದ್ಯಾನಿಲಯಗಳ ವಿಚಾರದಲ್ಲಿ ಯಾವುದೇ ಪ್ರಸ್ತಾಪವನ್ನು ಮಾಡಿಲ್ಲ. ನಮ್ಮ ರಾಜ್ಯ ಸರಕಾರವು ಮುಕ್ತ ವಿಶ್ವವಿದ್ಯಾನಿಲಯವನ್ನು ಮೈಸೂರಿನಲ್ಲಿ ಸ್ಥಾಪನೆ ಮಾಡಿ ಇವೊತ್ತು ಡಿಸ್ಟೆನ್ಸ್ ಕೋರ್ಸ್‌ಗಳಿಗೆ ಮುಕ್ತ ಅವಕಾಶವನ್ನು ರಾಜ್ಯದಲ್ಲಿ ಮಾಡಿ ಕೊಟ್ಟಿದ್ದಾರೆ. ಅದಕ್ಕೆ ತನ್ನ ಕಾರ್ಯವ್ಯಾಪ್ತಿ ಇದ್ದರೂ ಕೂಡ ಇವೊತ್ತು ಡಿಸ್ಟೆನ್ಸ್ ಕೋರ್ಸ್‌ನ್ನು ಇತರ ವಿಶ್ವವಿದ್ಯಾನಿಲಯಗಳು ಪ್ರಾರಂಭ ಮಾಡಿರತಕ್ಕಂಥಾದ್ದನ್ನು ನಾವು ಕಾಣುತ್ತಿದ್ದೇವೆ. ಆದ್ದರಿಂದ ಮಾನ್ಯ ಸಚಿವರು ಈ ವಿಧೇಯಕದಲ್ಲಿ ಮುಕ್ತ ವಿಶ್ವವಿದ್ಯಾನಿಲಯಗಳ ವಿಚಾರವನ್ನು ಕೂಡ ಅಳವಡಿಸಿಕೊಂಡರೆ ಅದು ತುಂಬಾ ಅತ್ಯುಪಯುಕ್ತವಾಗುತ್ತದೆ ಎಂಬ ಅಂಶವನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಇವೊತ್ತು ಸ್ಯಾಟ್ಯೂಟ್ಸ್ ಎಂಬ ವಿಶ್ವವಿದ್ಯಾನಿಲಯದ ಆಕ್ಟ್‌ನಲ್ಲಿ ಅಳವಡಿಸಿಕೊಂಡಿದ್ದಾರೆ, ನಾನು ಮೈಸೂರು ಮುಕ್ತ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯನಾಗಿ ಕಳೆದ ಅವಧಿಯಲ್ಲಿ ಕೆಲಸ ಮಾಡಿದ್ದೇನೆ. ಇವೊತ್ತು ಬಹಳಷ್ಟು ವಿಚಾರಗಳಲ್ಲಿ ವಿಶ್ವವಿದ್ಯಾನಿಲಯಗಳು ಸ್ಯಾಟ್ಯೂಟ್ಸ್‌ನಂತೆ ಕೆಲಸ ಮಾಡದೆ ಬಹಳಷ್ಟು ನ್ಯೂನ್ಯತೆಗಳನ್ನು ಮಾಡಿರತಕ್ಕಂಥಾದ್ದನ್ನು ಕೂಡ ನಾವು ಕಾಣುತ್ತಿದ್ದೇವೆ. ಆಕ್ಟ್‌ಗೆ ರೂಲ್ಸ್‌ನ್ನು ಫ್ರೇಮ್ ಮಾಡಿದ್ದರೂ ಕೂಡ ಉಲ್ಲಂಘನೆ ಮಾಡಿದ ಪ್ರಕರಣಗಳು ಬೇಕಾದಷ್ಟು ಇವೆ. ಅದಕ್ಕೆ ಯಾವುದಾದರೂ ಒಂದು ತಿದ್ದುಪಡಿಗಳನ್ನು ತಂದು ಸ್ಯಾಟ್ಯೂಟ್ಸ್‌ನ ಆಧಾರದ ಮೇಲೆ ವಿಶ್ವವಿದ್ಯಾನಿಲಯಗಳು ತಮ್ಮ ಕಾರ್ಯವೈಖರಿಯನ್ನು ನಡೆಸುವಂಥ ವಿಚಾರದಲ್ಲಿ ಸರಕಾರದವರು ಚಿಂತನೆಯನ್ನು ಮಾಡಬೇಕು. ವೈಸ್ ಚಾನ್ಸಲರ್‌ಗಳ ಅಪ್ಯಾಂಟ್‌ಮೆಂಟ್‌ನ ವಿಚಾರದಲ್ಲಿ ಮಾನ್ಯ ಸೋಮಶೇಖರ್‌ರವರು ಪ್ರಸ್ತಾಪ ಮಾಡಿದ್ದಾರೆ.

ಈ ವಿಚಾರದಲ್ಲಿ ಮರುಚಿಂತನೆ ಮಾಡುವ ಬಗ್ಗೆ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಸೆನೆಟ್‌ನ್ನು ವೈಂಡ್ ಅಪ್ ಮಾಡುವ ನಿರ್ಣಯವನ್ನು ತಾವುಗಳು ತೆಗೆದುಕೊಂಡಿದ್ದೀರಿ. ಇದರ ಬಗ್ಗೆಯೂ ಮರುಚಿಂತನೆ ಮಾಡುವ ಬಗ್ಗೆ ಇನ್‌ಕಾರ್ಪೋರೇಟ್ ಆದರೆ ಸಾಕಷ್ಟು ವಿಚಾರಗಳಲ್ಲಿ, ಅನುಕೂಲವಾಗುತ್ತದೆ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ.

7.20 ಪಿ.ಎಂ.

ಇತರ ರೆಗ್ಯುಲರ್ ವಿ.ವಿ.ಗಳು ಡಿಸ್ಟೆನ್ಸ್ ಕೋರ್ಸ್‌ನ್ನು ಪ್ರಾರಂಭ ಮಾಡಿರುವ ಹಿನ್ನಲೆಯಲ್ಲಿ, ಓಪನ್ ವಿ.ವಿ.ಗಳಲ್ಲಿ ಡಿಸ್ಟೆನ್ಸ್ ಕೋರ್ಸ್‌ಗೇ ಸೀಮಿತವಾಗಿ ಅವಕಾಶವನ್ನು ಈ ಆಕ್ಟ್‌ನಲ್ಲಿ ಇನ್‌ಕಾರ್ಪೋರೇಟ್ ಮಾಡಬೇಕೆಂದು ಹೇಳುತ್ತ ನನ್ನ ಮಾತು ಮುಗಿಸುತ್ತೇನೆ.

+ಶ್ರೀ ಕೆ. ಶ್ರೀನಿವಾಸಗೌಡ ಕುದವನ ಹಳ್ಳಿ (ಕೋಲಾರ) :— ಅಧ್ಯಕ್ಷರೇ, ಇವತ್ತು ಅಕಡೆಮಿಕ್ ಕೌನ್ಸಿಲ್‌ಗೆ ಮತ್ತು ಸೆನೆಟ್ ಸಿಂಡಿಕೇಟ್‌ಗಳ ಕಾರ್ಯನಿರ್ವಾಹಣೆಗೆ ಬಿಲ್ಲನ್ನು ತಂದಿರುವುದು ನೋಡಿದರೆ ಹಿಂದೆ ಪತ್ರಿಕೆಗಳಲ್ಲೆಲ್ಲ ಬಹಳ ಪ್ರಚಾರವಾಗಿದೆ ರಾಜ್ಯಪಾಲರ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಇದೆಲ್ಲ, ಹುನ್ನಾರ ಹೂಡಿದ್ದಾರೆ ಪತ್ರಿಕೆಗಳಲ್ಲಿ, ಬರೆದಿದ್ದಾರೆ. ನಾನೂ ಕೂಡ 30-35 ವರ್ಷದ ಹಿಂದೆ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ, ಅಧ್ಯಕ್ಷನಾಗಿದ್ದೆ. ಪ್ರಜಾತಂತ್ರ ಇರುವುದೇ ರಾಜಕೀಯ ಮಾಡುವುದಕ್ಕೆ. ಪ್ರಜಾತಂತ್ರದಲ್ಲಿ ರಾಜಕಾರಣ ಇರುವುದೇ ಇಲ್ಲ ಎಂದು ಯಾವ ವ್ಯವಸ್ಥೆ ಸಂಸ್ಥೆಯಲ್ಲಿದೆ? ಹಾಗಾದರೆ ಏಕೆ ಪ್ರಜಾಪ್ರಭುತ್ವ ಬೇಕು? ಇದು ಮೂಲಭೂತ ಪ್ರಶ್ನೆ. ಇವತ್ತು ಕಾಲೇಜುಗಳಲ್ಲಿ, ನಡೆಯುವ ಚುನಾವಣೆಗಳಲ್ಲಿ, ನಾವು ರಾಜಕಾರಣಿಗಳು ಯಾರೂ ಕೈಹಾಕದೇ ಇದ್ದರೆ ಅಲ್ಲಿ ಕೂಡ ರಾಜಕಾರಣ ಬರುವುದಿಲ್ಲ. ರಾಜಕೀಯ ಪಕ್ಷಗಳ ತೀಟೆಗೆ ಆ ಮಕ್ಕಳನ್ನು ನಾವು ಎಳೆದು ರಾಜಕೀಯ ಮಾಡುತ್ತೇವೆ, ಇದು ಇಲ್ಲಿರುವ 224 ಜನಕ್ಕೂ ಗೊತ್ತಿರುವುದೇ. ಇದನ್ನು ನಿಲ್ಲಿಸಬೇಕು. 1967-68ರಲ್ಲಿ ನಾನೇ ವಿದ್ಯಾರ್ಥಿ ಸಂಘದ ಚುನಾವಣೆಗೆ ನಿಂತಿದ್ದೆ. ಆದ್ದರಿಂದಲೇ ಮೂಲವಾಗಿ ತೋರಿಸಿ ಇವತ್ತು ಏನು ಸೆನೆಟ್ ಅನ್ನು ತೆಗೆಯಬೇಕು, ನಾಮಕರಣದ ಪದ್ಧತಿ ಮೂಲಕ ಅದನ್ನು ಮಾಡಬೇಕು ಎನ್ನುವುದನ್ನು ಕೇವಲ ಚುನಾವಣೆಗೆ ಅಡ್ಡ ಎನ್ನುವುದನ್ನು ಹೇಳುವುದು ತಪ್ಪು. ಹಾಗಾದರೆ ಚುನಾವಣೆ ನಮಗೂ ಬೇಡವಲ್ಲ.. ಪ್ರಜಾತಂತ್ರದಲ್ಲಿ ನಾವು ಕೆಲಸ ಮಾಡುವಾಗ ಎಲ್ಲಾ ಹಂತದಲ್ಲೂ ಪ್ರಜಾತಂತ್ರದ ಇನ್‌ವಾಲ್ವ್‌ಮೆಂಟ್ ಮುಖ್ಯ. ಆದ್ದರಿಂದ ರಾಜ್ಯಪಾಲರು ಯಾವುದೋ ಒಂದು ನಾಮಕರಣಕ್ಕೆ ವಿರೋಧ ಮಾಡಿದ್ದಾರೆ ಅಂತ ಈ ಬಿಲ್ಲನ್ನು ತಂದಿದ್ದಾರೆ ಅಂತ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ನಡೆಯುವವರು ಎಡುವುದು ಸಹಜ, ನೆಗೆದು ಬಂತು ಅಂತ ಮೂಗು ಹಿಯ್ದುಕೊಳ್ಳಲಾಗುವುದೇ? ಇದನ್ನು ಅರ್ಥಮಾಡಿಕೊಳ್ಳಬೇಕು. ಇದರ ಬಗ್ಗೆ ನಮ್ಮ ಸೋಮಶೇಖರ್ ಬಹಳ ವಿಷದವಾಗಿ ಹೇಳುರುವುದರಿಂದ ನಾನು ಹೆಚ್ಚಿಗೆ ಹೇಳಲು ಹೋಗುವುದಿಲ್ಲ. ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಸಚಿವರು ಕೊಟ್ಟಾಗ ಕಾಂಗ್ರೆಸ್ ಅಧ್ಯಕ್ಷರು ಹೇಳಿದರು

ಅದು ಕೆಸರು ಬಣ್ಣ, ನೆಪ್ಚೂನ್‌ಬ್ಲೂ ಅಂತ ಅಂದರು. ಹಾಗಾದರೆ ಈಗ ಏನು ಹೇಳೋಣ ನಾವು? ಕಾಂಗ್ರೇಸೀಕರಣ ಅನ್ನೋಣವೇ? ಇವತ್ತು ನೀವೇ ಇದನ್ನು ತಂದಾಗ ನಿಮಗೂ ಅವರಿಗೂ ಸ್ಪಷ್ಟವಾಗಿದೆ? ಇದು ಮೂಲಭೂತವಾಗಿ ಯೋಚನೆ ಮಾಡಬೇಕಾಗಿರುವುದು. ಬಿಲ್ ನೋಡಿದರೆ ಬರೀ ಕಾಂಗ್ರೇಸೀಕರಣ ಎದ್ದುಕಾಣುತ್ತದೆ. ಅದರಲ್ಲೇನು ಎರಡನೇ ಮಾತಿಲ್ಲ.

ಒಬ್ಬ ಮಾನ್ಯ ಸದಸ್ಯರು :— ಆ ಬಿಲ್‌ನಲ್ಲೆನೂ ಕಾಂಗ್ರೆಸ್ ಹೆಸರು ಬಂದಿಲ್ಲ. ಅದರ ಬಣ್ಣವೂ ಇಲ್ಲ, ಅದರೂ ನಿಮಗೆ ಹೇಗೆ ಕಾಣಿಸಿತು? ನೀವೇನಾದರೂ ಕಾಂಗ್ರೆಸ್ ಬಣ್ಣದ ಕನಸು ಕಂಡಿದ್ದೀರೋ ಏನೋ?

ಶ್ರೀ ಕೆ. ಶ್ರೀನಿವಾಸಗೌಡ ಕುದಮನಹಳ್ಳಿ :— ಡಾ: ಪರಮೇಶ್ವರರು ಅನೇಕ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಾರೆ. ಅವರ ಅಪ್ಪನವರ ಕಾಲದಿಂದ ಕೋಲಾರದಲ್ಲೂ ಒಂದು ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಇವರು ಮಂತ್ರಿಗಳಾದಾಗ ನಮಗನ್ನಿಸಿತು ಇನ್ನೂ ಒಳ್ಳೆಯ ಕಾರ್ಯಕ್ರಮ ತರುತ್ತಾರೆ ಅಂತ. ಆದರೆ ಇಂತಹ ಬಿಲ್ ತರಲು ನಿಮಗೆ ಯಾವ ಒತ್ತಡ ಬಂತು ಅಂತ ಯೋಚನೆ ಮಾಡುವ ಪರಿಸ್ಥಿತಿ ಬಂದಿದೆ. ನೀವು ಆಗಲೇ ಹೇಳಿದಿರಿ ನಾವು ಅಧ್ಯಾಪಕರಾಗೂ ಕೆಲಸ ಮಾಡಿದ್ದೇನೆ ಅಂತ. ಆ ಹಿನ್ನಲೆಯಲ್ಲಿ ಇದ್ದರೂ ಕೂಡ ನೀವು ಸೆನೆಟ್ ಎಲೆಕ್ಷನ್ಸ್ ಅನ್ನು ತೆಗೆದು ಬೇರೆ ಸಿಸ್ಟಮನ್ನು ತರುತ್ತೇವೆ ಅನ್ನುವುದು ತಪ್ಪು, ಎಂದು ಕೇಳಿತ್ತು, ಇವತ್ತು ಹಳ್ಳಿಗಳಲ್ಲೆಲ್ಲ ಏನಾಗಿದೆ? ಎಸ್‌ಎಸ್‌ಎಲ್‌ಸಿ ಪಾಸು, ಪಿಯುಸಿ ಫೇಲ್. ನಾವೆಲ್ಲ ಗ್ರಾಮೀಣ ಪ್ರದೇಶದಿಂದ ಬಂದವರು. ಎಸ್‌ಎಸ್‌ಎಲ್‌ಸಿ ಪಿಯುಸಿ ಓದುವಾಗ ತಾಪ ತಂದೆ ತಾಯಿಗಳು ಕೂಲಿನಾಲಿ ಮಾಡುತ್ತಾರೆ. ಆದರೆ ಅವನು ಅಮೇಲೆ ಓದುವುದಿಲ್ಲ, ವ್ಯವಸಾಯನೂ ಮಾಡುವುದಿಲ್ಲ, ಏನೂ ಮಾಡುವುದಿಲ್ಲ, ಬರೀ ಜಗ್ಗಿ ಮೇಲೆ ಕೂತು ನಮ್ಮ ಕಡೆ ಚಮಕಾಭಾರ, ಹುಲ್ಲುಕ್ಕಿ ಅಂತ ಆಡುತ್ತಾರೆ, ಆ ಕಡೆ ಕಾರ್ಡ್ಸ್ ಆಡಬಹುದೇನೋ. ಅಂಥವರಿಗೆಲ್ಲ ಬೇಕಾಗಿ ಮಾರ್ಗದರ್ಶಕ ಆಗುತ್ತದೆ ಅಂತ ನೀವು ಬಿಲ್‌ನಲ್ಲಿ ಹೇಳಿದ್ದೀರಿ. ಆದರೆ ಅದನ್ನು ಓದಿದ ಮೇಲೆ ನನಗೇನೋ ಅದು ಮಾರ್ಗದರ್ಶಕವಾಗಿ ಕಾಣಂವುದಿಲ್ಲವೆಂದು ಹೇಳಿ, ಇವತ್ತು ನಿಮ್ಮ ಮೂಲಭೂತ ಉದ್ದೇಶ ರಾಜ್ಯಪಾಲರ ಅಧಿಕಾರ ಕಿತ್ತುಕೊಂಡು ಸರ್ಕಾರವೇ ಕೊಡಬೇಕೆಂಬುದು ಸ್ಪಷ್ಟವಾಗಿ ಆಗುತ್ತದೆ. ಸ್ವಾತಂತ್ರ್ಯ ಬಂದಾಗಿನಿಂದಲೂ ರಾಜ್ಯಪಾಲರಿಗೇ ಅಧಿಕಾರವಿತ್ತು ಇವತ್ತು ಇದ್ದಕ್ಕಿದ್ದ ಹಾಗೇ ಅವರ ಅಧಿಕಾರ ತೆಗೆಯಬೇಕು ಅಂತ ಯಾವ ಒತ್ತಡ ಬಂತು? ಇದನ್ನೂ ನಾವು ಅರ್ಥಮಾಡಿಕೊಳ್ಳಬೇಕು. ನಿಜ ಸ್ವಾಮಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ, ನಮ್ಮನ್ನಮ್ಮದೇ ಆದ ಚಿಂತನೆಗಳಿರುತ್ತವೆ. ಅದಕ್ಕೆ ಒಂದೇ ಸಲ ಬ್ರೇಕ್ ಹೊಟ್ಟು, ಒಂದೇ ದಿವಸ ತಮಗೆ ಮೆಜಾರಿಟಿ ಇದೆ ಅಂತ ಬಿಲ್ ತರುವ ಮೂಲಕ ಸಮಗ್ರ ವ್ಯವಸ್ಥೆಯನ್ನೇ ಕಿತ್ತುಕಾಲುವುದು ಒಳ್ಳೆಯದೇ? ಇದನ್ನು ನಾವು ಅರ್ಥಮಾಡಿಕೊಳ್ಳಬೇಕು. ನೀವೇನು ಶಾಶ್ವತವೇ? ಐದು ವರ್ಷದಾದ ಮೇಲೆ ನೀವೇ ಬರುತ್ತೀರಿ ಅನ್ನುವುದಕ್ಕೆ ಏನು ಗ್ಯಾರಂಟಿ? ಈ ಸಿಸ್ಟಮನ್ನು

ಮುಂದಿನ ಆಲೋಚನೆ ಇಟ್ಟುಕೊಂಡು ನಾವು ಮಾಡಬೇಕಾಗಿದೆ. ನಾಳೆ ಇನ್ನೊಬ್ಬರು ಬಂದಾಗ ಅದು misuse ಆಗುವ ಪರಿಸ್ಥಿತಿ ಬಂದರೆ? ಇಲ್ಲ, ನಾವು ಹಾಗೆ ಮಾಡುವುದಿಲ್ಲ, ರಾಜಕೀಕರಣ ಮಾಡುವುದಿಲ್ಲ, ಅಧಿಕಾರವನ್ನು ಪಾರದರ್ಶಕವಾಗಿ ನಡೆಸುತ್ತೇವೆ ಅಂತ ಹೇಳಿ ನೀವು ಹಂಗೇ ನಡೆಸಬಹುದು. ಇದನ್ನು ನೀವು ಚಿಂತನೆ ಮಾಡಬೇಕಾದ್ದು ಅಗತ್ಯವೆಂದು ಹೇಳಿ, ನನ್ನನ್ನು ಕೂಡ ಬೆಂಗಳೂರು ವಿವಿಯ ಸೆನೆಟ್ ಮೆಂಬರಾಗಿ ಈ ಮನೆಯಿಂದಲೇ ಹಾಕಿದ್ದಾರೆ. ನಾನು ಒಂದು ಸಭೆಗೆ ಹೋಗಿದ್ದೆ, ಆಮೇಲೆ ಹೋಗಲಿಲ್ಲ. ಕಾರಣಗಳು ಬೇರೆ ಇರಬಹುದು. ಚುನಾಯಿತ ಪ್ರತಿನಿಧಿಗಳು ಎಲ್ಲದರಲ್ಲೂ ಇರಬೇಕಾಗುತ್ತದೆ. ಅದನ್ನು ಅಷ್ಟಹಾಕುವುದು ಬೇಡವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

8. ಪ್ರಕಟಣೆ

ಅಧ್ಯಕ್ಷರು :— ಈಗೊಂದು ಪ್ರಕಟಣೆ. ಮಾನ್ಯ ಸಭಾಪತಿಗಳಿಂದ ಈ ಕೆಳಕಂಡ ಸಂದೇಶ ಬಂದಿದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 11ರ ಮೇರೆಗೆ ಕರ್ನಾಟಕ ವಿಧಾನಪರಿಷತ್ತು ದಿನಾಂಕ 24-11-2000ದಂದು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣೆ ವಿಧೇಯಕ-2000 ಅನ್ನು ಯಾವುದೇ ತಿದ್ದುಪಡಿ ಇಲ್ಲದೆ ಅನುಮೋದಿಸಲಾಗಿದೆ ಎಂದು ತಿಳಿಸಿರುತ್ತಾರೆ.

9. ಶಾಸನ ರಚನೆ

ಪರ್ಯಾಲೋಚನಾ ಪ್ರಸ್ತಾಪ

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2000 (ಮುಂದು)

+ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಅಧ್ಯಕ್ಷರೇ ಪ್ರಚಲಿತ ನನ್ನ ಮನಃನಲ್ಲಿರುವ ಸಮಸ್ಯೆಯನ್ನು ತಮ್ಮ ಮುಂದಿಡಲು ಇಚ್ಛಿಸುತ್ತೇನೆ. ಇವತ್ತು ಬೆಳಿಗಿನಿಂದ ಪಾರದರ್ಶಕತೆ ಬಗ್ಗೆ ಅಕೌಂಟಿಬ್ಲಿಟಿ ಬಗ್ಗೆ ಅತ್ಯುತ್ತಮ ಬಿಲ್‌ಗಳು ಬಂದವು. ಅವುಗಳನ್ನು ವೋಟಿಗೆ ಹಾಕುವ ಸಂದರ್ಭದಲ್ಲಿ ನಮ್ಮ ಸದಸ್ಯರೆಲ್ಲರೂ ಸರ್ವಾನುಮತ ಎಂಬ ಶಬ್ದ ಉಲ್ಲೇಖ ಮಾಡಿದರು. ಅವೆಲ್ಲ ಸರ್ವಾನುಮತದಿಂದ ಪಾಸಾಗಲಿ ಎಂಬ ಅಭಿಪ್ರಾಯ ಅವರದು. ಆದರೆ ಡಾ: ಪರಮೇಶ್ವರ ಬಗ್ಗೆ ನಮಗೆ ಸಾಕಷ್ಟು ಗೌರವವಿದೆ. ತಾವು ಇಂತಹ ಬಿಲ್ ತರುತ್ತೀರೆಂಬುದು ನಮಗೆ ನಿಜವಾಗೂ ಆಘಾತ ತಂದಿದೆ. ಈಗಾಗಲೇ ವರ್ಷದ ಮಧ್ಯಾವಧಿಯಲ್ಲಿ ಕಾಲೇಜು ಫೀಸನ್ನು 360 ಇದ್ದದನ್ನು 560ಕ್ಕೆ ಏರಿಸಿದಿರಿ. ಹಾಗೂ ಖಾಸಗಿ ಕಾಲೇಜುಗಳು ಇದನ್ನು ಡಬಲ್ ಮಾಡುವಂತಹ ಪ್ರಾವಿಸನ್ನೂ ಮಾಡಿದಿರಿ. ವಿದ್ಯಾರ್ಥಿವ್ಯಂದ ರಾಜ್ಯಾದ್ಯಂತ ಜಿಲ್ಲಾಧಿಕಾರಿಗಳಿಗೆ ಮನವಿ ಕೊಡುವುದು, ಧರಣಿ, ಮುಷ್ಕರ ಎಲ್ಲಿತನಕ ಅಂದರೆ ನೇರವಾಗಿ ಸಚಿವರಿಗೆ ಛೇರಾವ್ ಹಾಕುವುದು ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ಎಬಿವಿಪಿ ಇಂದ ಬೆಂಗಳೂರು ಚಲೊ ಎಂಬ ಕಾರ್ಯಕ್ರಮ ನಡೆದಿತ್ತು. ಸಹಸ್ರಾರು ವಿದ್ಯಾರ್ಥಿಗಳು ಬಂದಿದ್ದರು. ಮುಖ್ಯಮಂತ್ರಿಗಳನ್ನು ಭೇಟಿಯಾಗಿ